ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 33

೧೫ ಜೂನ್ ೧೯೫೮

★

ಪುಟ ೧೦ ಬೆಲೆ: ೧೩ ನಯೇ ಪೈಸೆ

★

ರಾಜ್ಯದಲ್ಲಿ ಕಮ್ಯೂನಿಸ್ಟ್ ಪಾರ್ಟಿ ಬಲಗೊಳಿಸಿರಿ

ಕಮ್ಯೂನಿಸ್ಟ್ ಪಾರ್ಟಿ ಕರ್ನಾಟಕ ಪ್ರಾಂತ ಸಮಿತಿಯ ಸಭೆ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತ ಸಮಿತಿಯು ತಾ|| 9 ರಂದು ಬೆಂಗಳೂರಲ್ಲಿ ಸಮಾವೇಶಗೊಂಡು ಅಮೃತಸರ ಪಾರ್ಟಿ ಅಧಿವೇಶನದಲ್ಲಾದ ಗೊತ್ತುವಳಿ ಬಗ್ಗೆ ಪಾರ್ಟಿ ಸದಸ್ಯರಲ್ಲೂ, ಸಾರ್ವಜನಿಕರಲ್ಲೂ ತೀವ್ರ ಪ್ರಚಾರ ಮಾಡುವ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿತು. ಆಗಸ್ಟ್ ತಿಂಗಳಿಂದ "ಜನಯುಗ" ಎಂಬ ಪುರೋಗಾಮಿ ಮಾಸ ಪತ್ರಿಕೆಯನ್ನು ಪ್ರಕಟಿಸಬೇಕೆಂದೂ ನಿರ್ಧರಿಸಲಾಗಿದೆ.

ಸೆಪ್ಟೆಂಬರ್ ತಿಂಗಳಿಂದ ನವಂಬರ್ ತಿಂಗಳೊಳಗೆ ಪ್ರಾಂತಾದ್ಯಂತ ಪಾರ್ಟಿಯ ಜಿಲ್ಲಾ ಸಮ್ಮೇಳನಗಳನ್ನು ನಡೆಸಬೇಕೆಂದೂ ಡಿಸೆಂಬರದಲ್ಲಿ ಪ್ರಾಂತೀಯ ಸಮ್ಮೇಳನ ಸೇರಿಸಬೇಕೆಂದೂ ತೀರ್ಮಾನವಾಗಿದೆ.

ಸಭೆಯಲ್ಲಿ ಎನ್. ಎಲ್. ಉಪಾಧ್ಯಾಯ (ಕಾರ್ಯದರ್ಶಿ), ಬಿ. ವಿ. ಕಕ್ಕಿಲಾಯ, ಎಂ. ಸಿ. ನರಸಿಂಹನ್ ಎಂ. ಎಲ್. ಎ., ಎಂ. ಎಸ್. ಕೃಷ್ಣನ್, ಎನ್. ಕೆ. ಉಪಾಧ್ಯಾಯ (ಬಿಜಾಪುರ), ಸಿ. ಬಿ. ಮೊನ್ನಯ್ಯ (ಕೊಡಗು), ಶ್ರೀನಿವಾಸ್‌ಗುಡಿ (ಗುಲ್ಬರ್ಗಾ) ಹಾಜರಿದ್ದರು.

ಪ್ರಾಂತ ಸಮಿತಿಯ ಕಾರ್ಯದರ್ಶಿಯಾದ ಎನ್. ಎಲ್. ಉಪಾಧ್ಯಾಯರು ಪಾರ್ಟಿ ಚಟುವಟಿಕೆ ಮತ್ತು ರಾಜ್ಯದ ಪರಿಸ್ಥಿತಿ ಬಗ್ಗೆ ವರದಿ ಕೊಟ್ಟರು. ಪ್ರಾಂತ್ಯದ ರಾಜಕೀಯ ಪರಿಸ್ಥಿತಿ ಬಗ್ಗೆ ಕೆಳಗಿನ ನಿರ್ಣಯವನ್ನು ಮಾಡಲಾಯಿತು.

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತ ಸಮಿತಿಯು ಪ್ರಾಂತದ ರಾಜಕೀಯ ಘಟನೆಗಳ ಬಗ್ಗೆ ತೀವ್ರ ಕಳಕಳಿಯನ್ನು ವ್ಯಕ್ತಪಡಿಸುತ್ತದೆ. ಮಂತ್ರಿಮಂಡಲದ ಬದಲಾವಣೆಯು ಎಲ್ಲರ ಗಮನವನ್ನು ಸೆಳೆದಿರುವುದಲ್ಲದೆ ಪ್ರಜಾಪ್ರಭುತ್ವ ಚಳುವಳಿಗೆ ಸಂಬಂಧಿಸಿದ ಕೆಲವು ಮುಖ್ಯ ಪ್ರಶ್ನೆಗಳನ್ನು ಎತ್ತಿರುತ್ತದೆ.

ಕಾಂಗ್ರೆಸ್ಸಿನ ನೀತಿ ಬಾಹಿರ ಸ್ವಭಾವ

ಮೈಸೂರಿನ ಮಂತ್ರಿಮಂಡಲವು ಬದಲಾಗಿರುವುದನ್ನು ನೋಡಿದರೆ, ಶಾಸನ ಸಭೆಗಳಲ್ಲಿ ಅತ್ಯಧಿಕ ಬಹುಮತವಿದ್ದರೂ ಕಾಂಗ್ರೆಸ್ ಪಕ್ಷವು ಸ್ಥಿರವಾದ ಸರ್ಕಾರವನ್ನೊದಗಿಸುವ ಶಕ್ತಿಯನ್ನು ಕಳೆದುಕೊಂಡಿದೆಯೆಂಬುದು ಸ್ಪಷ್ಟವಾಗುತ್ತದೆ. ಈ ಬದಲಾವಣೆಯನ್ನು ತಂದಿರುವ ರೀತಿಯನ್ನು ನೋಡಿದರೆ ಪ್ರಾಂತ್ಯ ಹಾಗೂ ಕೇಂದ್ರದ ಕಾಂಗ್ರೆಸ್ ನಾಯಕತ್ವದ ನೀತಿಬಾಹಿರ ಮತ್ತು ಸಂದರ್ಭ ಸಾಧಕ ಸ್ವಭಾವವು ವ್ಯಕ್ತವಾಗುತ್ತದೆ.

ಮಂತ್ರಿ ಮಂಡಲದ ಬದಲಾವಣೆಯು ಸರಕಾರದ ಧೋರಣೆ ಮತ್ತು ಕಾರ್ಯಕ್ರಮಗಳಲ್ಲಿ ಸುಧಾರಣೆಯನ್ನುಂಟು ಮಾಡುವುದೆಂದು ತಿಳಿಯಲು ಸಾಧ್ಯವಿಲ್ಲ. ಅದು ಪ್ರಾಂತ್ಯದ ಕಾಂಗ್ರೆಸ್ ಪಕ್ಷದೊಳಗಿನ ಆಳವಾದ ಬಿಕ್ಕಟ್ಟನ್ನು ಮಾತ್ರ ಪ್ರತಿಬಿಂಬಿಸುತ್ತದೆ.

ಹಿಂದಿನ ಮಂತ್ರಿ ಮಂಡಲವು ಜನವಿರೋಧಿ ತೆರಿಗೆ ಕ್ರಮಗಳ ಬಗ್ಗೆ, ಜನರ ತುರ್ತಿನ ಮತ್ತು ಮುಖ್ಯ ಸಮಸ್ಯೆಗಳನ್ನು ಬಗೆಹರಿಸಲು ತೀರ ಅಸಮರ್ಥವಾಗಿದ್ದ ಬಗ್ಗೆ ಕಾರ್ಮಿಕ ವಿರೋಧ ನೀತಿಯ ಬಗ್ಗೆ ಗೃಹಶಾಖೆಯು ಪೋಲೀಸ್ ಪಡೆಯನ್ನು ಅನ್ಯಾಯವಾಗಿ ಉಪಯೋಗಿಸುತ್ತಿದ್ದ ಬಗ್ಗೆ, ಲಂಚಗುಳಿತನ ಮತ್ತು ಜಾತೀಯ ಸ್ವಜನ ಪಕ್ಷಪಾತತನದ ಬಗ್ಗೆ ಹೆಸರುವಾಸಿಯಾಗಿತ್ತು. ಕಾರ್ಮಿಕರು ರೈತರು ಮತ್ತಿತರ ಜನತೆ ಅದನ್ನೆಲ್ಲ ಪ್ರತಿಭಟಿಸಿ, ಹೋರಾಡಿ ಬಯಲಿಗೆಳೆದಿದ್ದಾರೆ. ಇದೆಲ್ಲ ನಿಜವಾದರೂ ಮಂತ್ರಿ ಮಂಡಳದ ಬದಲಾವಣೆಗೆ ಕಾಂಗ್ರೆಸ್ಸಿನೊಳಗೆ ಆಳವಾಗಿ ಬೇರೂರಿರುವ ಜಾತೀಯತೆ, ಅಧಿಕಾರ ಲಾಲಸೆ, ಒಳಗುಂಪುಗಳ ಮತ್ಸರ ಮುಂತಾದುವೇ ಮುಖ್ಯ ಕಾರಣವೆಂಬುದು ಸ್ಪಷ್ಟವಾಗಿದೆ.

ಹೊಸ ಮಂತ್ರಿಮಂಡಲವೂ ಅಷ್ಟೆ

ಹೊಸ ಮಂತ್ರಿ ಮಂಡಲವು ಅದರ ವಕ್ತಾರರು ಮತ್ತು ಮುಖ್ಯ ಮಂತ್ರಿಗಳು ಎಷ್ಟು ಕೊಚ್ಚಿಕೊಂಡರೂ ಕೂಡ ನಿಜವಾಗಿ ಪ್ರಗತಿಶೀಲವಾದ ಭೂಸುಧಾರಣೆಯನ್ನು ಜಾರಿಗೆ ತರುವುದೆಂದಾಗಲಿ, ಆಡಳಿತೆಯನ್ನು ಉತ್ತಮಗೊಳಿಸುವುದೆಂದಾಗಲಿ, ಜನತೆಯ ಸಮಸ್ಯೆಗಳನ್ನು ಬಗೆಹರಿಸುವುದೆಂದಾಗಲಿ ಕಮ್ಯೂನಿಸ್ಟ್ ಪಾರ್ಟಿಯು ಭಾವಿಸುವುದಿಲ್ಲ. ಮಂತ್ರಿ ಮಂಡಲದಲ್ಲಿರುವ ವ್ಯಕ್ತಿಗಳನ್ನು ನೋಡಿದರೆ ಅಂಥ ಆಶೆಗಳಿಗೆ ಎಡೆಯಿಲ್ಲವೆಂಬುದು ಸ್ಪಷ್ಟವಾಗುವುದು. ಬಲವಾದ ಪ್ರಜಾ ಪ್ರಭುತ್ವ ಚಳುವಳಿಯಿಂದ ಮಾತ್ರ ಜನರ ಹಿತಗಳನ್ನು ರಕ್ಷಿಸಲು ಮತ್ತು ಬೇಡಿಕೆಗಳನ್ನು ಪಡೆಯಲು ಸಾಧ್ಯವಾಗುವುದು.

ಪ್ರಾಂತ್ಯದ ಆರ್ಥಿಕ ಬೆಳವಣಿಗೆಗೂ, ಯೋಜನೆಯನ್ನು ಕಾರ್ಯಕಾರಿಗೊಳಿಸುವುದಕ್ಕೂ, ಜಾರಿಗೆ ತರುವುದಕ್ಕೂ ಯೋಗ್ಯವಾದ ಆಡಳಿತೆಗೂ, ಜನರ ಸಮಸ್ಯೆಗಳನ್ನು ಪರಿಹರಿಸುವುದಕ್ಕೂ ಸರಕಾರದ ಅಸ್ಥಿರತೆಯು ತಡೆಯಾಗಿ ನಿಂತಿದೆ. ರಾಜ್ಯದ ಮತ್ತು ಜನತೆಯ ಹಿತಗಳಿಗಿಂತಲೂ ವೈಯಕ್ತಿಕ ಹಾಗೂ ಗುಂಪು ಸ್ವಾರ್ಥತೆಗಳೇ ಕಾಂಗ್ರೆಸ್ ನಾಯಕತ್ವಕ್ಕೆ ಮುಖ್ಯವಾಗಿವೆಯೆಂದು ಇದು ತೋರಿಸುತ್ತದೆ

ಇದಕ್ಕೆ ಪ್ರತಿಯಾಗಿ, ಕೇರಳದ ಕಮ್ಯೂನಿಸ್ಟ್ ನಾಯಕತ್ವದ ಮಂತ್ರಿಮಂಡಲವು, ಶಾಸನ ಸಭೆಯಲ್ಲಿ ಅತ್ಯಲ್ಪ ಬಹುಮತವಿದ್ದರೂ, ಪ್ರಬಲ ಪ್ರತಿ ಪಕ್ಷಗಳ ತೀವ್ರ ಧಾಳಿಗೆ ಗುರಿಯಾಗಿದ್ದರೂ, ಪ್ರಗತಿಗಾಮಿ ಧೋರಣೆಗಳನ್ನು ಅನುಸರಿಸುವುದ

(ಕೊನೇ ಪುಟ ನೋಡಿ)

ಜತ್ತಿ ಜಾರಿದರೂ.....?

ಕೆಲದಿನಗಳ ಹಿಂದೆ ಶಿವಮೊಗ್ಗೆಯಲ್ಲಿ ಮಾತನಾಡುತ್ತ ಮುಖ್ಯ ಮಂತ್ರಿ ಜತ್ತಿಯವರು "**ಭಯ ದಾಕ್ಷಿಣ್ಯಗಳಿಗೊಳಗಾಗದೆ ಭೂಸುಧಾರಣೆ ಜಾರಿಗೆ ತರಲಾಗುವುದು**" ಎಂದು ತಿಳಿಸಿದರು.

ಜೂನ್ 10ರಂದು ಪತ್ರಿಕಾ ಪ್ರತಿನಿಧಿಗಳೊಂದಿಗೆ ಈ ಬಗ್ಗೆ ಮಾತನಾಡುತ್ತ ಜತ್ತಿಯವರು ಆ ರೀತಿ ಏನೂ ಇಲ್ಲ ಎಂದು ತಿಳಿಸಿದ್ದಾರೆ. ಅಲ್ಲದೆ, "ಈ ವಿಷಯದಲ್ಲಿ ನನ್ನ ಸ್ವಂತ ಅಭಿಪ್ರಾಯವನ್ನು ಜತ್ತಿಸಮಿತಿ ವರದಿಯಲ್ಲಿ ತಿಳಿಸಿರುತ್ತೇನೆ. ಆದರೆ ಈ ಸಮಿತಿಯ ವರದಿಯೇ ಅಂತಿಮ ತೀರ್ಮಾನವಲ್ಲ !" ಎಂದು ಹೇಳಿದ್ದಾರೆ.

"ಇದರ ಬಗ್ಗೆ ವಿಧಾನ ಮಂಡಲದ ಸದಸ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸ್ಸಾರೆ. ವರದಿ ಬಗ್ಗೆ ಎಂ. ಪಿ. ಸಿ. ಸದಸ್ಯರುಗಳ ಅಭಿಪ್ರಾಯಪಡೆದು, ಸಚಿವ ಸಂಪುಟದ ಮುಂದಿಟ್ಟು, ಶಾಸನಸಭಾ ಕಾಂಗ್ರೆಸ್ ಪಕ್ಷದ ಒಪ್ಪಿಗೆ ಪಡೆದು ನಂತರ ಭೂಸುಧಾರಣಾ ಮಸೂದೆ ತರಲಾಗುವುದು.

"ವರದಿಯನ್ನು ತಯಾರಿಸಿದ ಸಮಿತಿಯ ಅಧ್ಯಕ್ಷನಾಗಿ ನಾನು ನನ್ನ ಧೋರಣೆ ವ್ಯಕ್ತಪಡಿಸಿರುವೆ. ಆದರೆ ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಬೇಕಾದ್ದು ಶಾಸನ ಸಭಾ ಕಾಂಗ್ರೆಸ್ ಪಕ್ಷ. ನಾನಂತೂ ತೆರೆದ ಮನಸ್ಸಿನಿಂದಲೇ ಇರುವೆ" ಎಂದೂ ಹೇಳಿದ್ದಾರೆ.

ವಿಮಾನ ಕಾರ್ಖಾನೆ ನೌಕರರ ವಿವಾದ ಪರಿಹಾರದ ಹಾದಿಯಲ್ಲಿ !

ಮೂರು ವರ್ಷಗಳ ಹೋರಾಟದ ನಂತರ ಕೆಲವು ಮುಖ್ಯ ಪ್ರಶ್ನೆಗಳ ಇತ್ಯರ್ಥ

ಮೂರು ವರ್ಷಗಳ ಸತತವಾದ ಚಳವಳಿ ಮತ್ತು ಮೂರು ತಿಂಗಳ ಹಿಂದೆ ನಡೆದ ಹೋರಾಟದ ಪರಿಣಾಮವಾಗಿ ಹಿಂದೂಸ್ತಾನ್ ವಿಮಾನ ಕಾರ್ಖಾನೆ ನೌಕರರ ಕೆಲವು ಮುಖ್ಯ ಪ್ರಶ್ನೆಗಳು ಇತ್ಯರ್ಥವಾಗಿವೆ. ಹಿಂದೆ ಜನರಲ್ ಮ್ಯಾನೇಜರ್ ಆಗಿದ್ದ ಶ್ರೀನಾಗೇಶ್‌ರವರ ಹಠಮಾರಿತನದಿಂದಾಗಿ ಪ್ರಶ್ನೆಗಳು ಬಗೆಹರಿಯದೆ ಬಿಕ್ಕಟ್ಟಿನಲ್ಲಿತ್ತು. ನೌಕರರ ಸಂಘವನ್ನು ಮುರಿಯಲು ಅವರು ನಡೆಸಿದ ಯತ್ನವೆಲ್ಲವೂ ಸಹ ಇಂದು ಭಗ್ನಗೊಂಡಿದೆ.

ಮಾನ್ಯ ರಕ್ಷಣಾ ಮಂತ್ರಿಯವರು ಕಳೆದ ತಿಂಗಳು ಭೇಟಿ ಇತ್ತಿದ್ದಾಗ, ತುಟ್ಟಿ ಭತ್ಯ, ಟ್ರಾನ್ಸ್‌ಪೋರ್ಟ್ ಚಾರ್ಜಿನಲ್ಲಿ ರಿಯಾಯಿತ, ಕಡಿಮೆ ಮಾಡಿದ್ದ ಟಿಎ ಸ್ಪೇಷನ್ ಭತ್ಯ ಭರ್ತಿ ಮಾಡುವುದು ಇತ್ಯಾದಿ ಬೇಡಿಕೆಗಳ ಬಗ್ಗೆ ಮಾಡಿದ್ದ ಸಲಹೆಯನ್ನು ನೌಕರರ ಸಂಘವು ಒಪ್ಪಿಕೊಂಡು ಅದರ ಆಧಾರದ ಮೇಲೆ ಮ್ಯಾನೇಜ್‌ಮೆಂಟಿನೊಂದಿಗೆ ಚರ್ಚೆ ನಡೆಸಿ ಸಂಬಂಧಪಟ್ಟ ಉಳಿದ ಪ್ರಶ್ನೆಗಳನ್ನು, ಮುಖ್ಯವಾಗಿ ಕೆಲಸಕ್ಕೆ ಹಿಂತೆಗೆದುಕೊಳ್ಳುವುದನ್ನು ಇತ್ಯರ್ಥಗೊಳಿಸಲು ಮಾಡಿದ ಯತ್ನ ಸಫಲವಾಗ

(ಕೊನೇ ಪುಟ ನೋಡಿ)

ಇಟಲಿಯ ಸಾರ್ವತ್ರಿಕ ಚುನಾವಣೆಗಳು

ಇತ್ತೀಚೆಗೆ ಇಟಲಿಯಲ್ಲಿ ನಡೆದ ಉಪಚುನಾವಣೆಗಳಲ್ಲಿ ಎಡಪಕ್ಷಗಳು ತಮ್ಮ ಓಟಿನ ಸಂಖ್ಯೆಯನ್ನು ಹೆಚ್ಚಿಸಿಕೊಂಡಿವೆ. ತೀವ್ರ ಪ್ರತಿಗಾಮಿಗಳ ಧಾಳಿಯ ಇದಿರಿನಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ತನ್ನ ಸ್ಥಾನವನ್ನು ಉಳಿಸಿಕೊಂಡಿರುವುದಷ್ಟೆ ಅಲ್ಲದೆ, ಅಧಿಕ ಮತ ಗಳಿಸಿದೆ.

ಮೇ ತಿಂಗಳ ಅಂತ್ಯದಲ್ಲಿ ನಡೆದ ಈ ಸಾರ್ವತ್ರಿಕ ಚುನಾವಣೆಗಳಲ್ಲಿ ಇಟಲಿಯ ಜನತೆಯು ಇಟಲಿಯ ಚೇಂಬರ್ ಆಫ್ ಡೆಪ್ಯೂಟೀಸ್‌ಗೆ 596 ಪ್ರತಿನಿಧಿಗಳನ್ನು ಆರಿಸಲು ಮತ್ತು ಸೆನೇಟ್ ಸಭೆಗೆ 246 ಮಂದಿಯನ್ನು ಆರಿಸಲು ತಮ್ಮ ಮತ ಚಲಾಯಿಸಿದರು.

ಚುನಾವಣೆಯಲ್ಲಿ ಬಂಡವಾಳಶಾಹಿಗಳ ಮತ್ತು ಚರ್ಚಿನ ಬೆಂಬಲ ಪಡೆದಿರುವ ಕ್ರಿಶ್ಚಿಯನ್ ಡೆಮಾಕ್ರಟಿಕ್ ಪಕ್ಷವು ಶೇಕಡ 50ರಷ್ಟು ಮತ ಗಳಿಸಿ ಬಹುಮತ ಪಡೆಯಲು ಯತ್ನಿಸಿತು. ಹಿಂದಿದ್ದ ಚುನಾವಣಾ ನಿಯಮವನ್ನು ಬದಲಿಸಿ ಶೇ. 50ರಷ್ಟು ಮತ ಗಳಿಸುವ ಯಾವುದೇ ಪಕ್ಷವು ಪಾರ್ಲಿಮೆಂಟಿನಲ್ಲಿ 2/3 ಭಾಗ ಸ್ಥಾನಗಳನ್ನು ಪಡೆಯುವುದೆಂದು ಮಾಡಿತು. ಆದರೆ ಚುನಾವಣಾ ಫಲಿತಾಂಶವು ಅವರ ಆಶಾಗೋಪುರವನ್ನು ಉರುಳಿಸಿದೆ. ಕಮ್ಯೂನಿಸ್ಟರಿಗೆ ಮತವಿತ್ತಲ್ಲಿ ಜಾತಿಯಿಂದ ಹೊರಗಿರಿಸುವುದಾಗಿ ಚರ್ಚು ಬೆದರಿಸಿ ಒತ್ತಾಯ ತಂದರೂ ಸಹ ಪರಿಣಾಮವಾಗಲಿಲ್ಲ. 282 ಪಾದ್ರಿಗಳು 22,000 ಇಗರ್ಜಿಗಳಲ್ಲಿ ಕ್ರಿಶ್ಚಿಯನ್ ಡೆಮಾಕ್ರಾಟರಿಗೇ ಜನರು ಮತವೀಯಬೇಕೆಂದು ಪ್ರಚಾರ ಮಾಡಿದರೂ ಸಹ ಅವರಿಗೆ ಶೇ. 50 ಮತ ಬರಲಿಲ್ಲ. ಅವರಿಗೆ ದೊರಕಿದ್ದು ಶೇ. 41·2 ಮಾತ್ರ. ಹಿಂದಿನ ಚುನಾವಣೆಗಳಲ್ಲಿ ಮತವಿತ್ತಿದ್ದವರು ಮಾತ್ರ ಅವರಿಗೆ ಈ ಬಾರಿಯೂ ಮತವಿತ್ತರು ಅಷ್ಟೆ.

ಕಮ್ಯೂನಿಸ್ಟರೂ ಮತ್ತು ಸೋಷಲಿಸ್ಟರೂ ಈ ಚುನಾವಣೆಯಲ್ಲಿ ಹೆಚ್ಚು ಮತ ಗಳಿಸಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಯು ಈ ಚುನಾವಣೆಯಲ್ಲಿ ಸೆನೇಟಿಗೆ ಶೇಕಡ 21 8 ಮತ ಗಳಿಸಿದೆ, ಕಳೆದ ಚುನಾವಣೆಯಲ್ಲಿ ಶೇ. 20·2 ದೊರಕಿತ್ತು, ಚೇಂಬರ್ ಆಫ್ ಡೆಪ್ಯೂಟೀಸ್‌ಗೆ ಅವರಿಗೆ ಶೇಕಡ 22·7 ಮತ ದೊರಕಿದೆ, ಹಿಂದಿನ ಚುನಾವಣೆಯಲ್ಲಿ ಶೇ. 22·5 ದೊರಕಿತ್ತು.

ನೆನ್ನಿ ಸೋಷಲಿಸ್ಟರಿಗೆ ಶೇ. 14·2 ಮತ್ತು ದೊರಕಿದೆ, ಕಳೆದ ಚುನಾವಣೆಯಲ್ಲಿ ಅವರಿಗೆ ಶೇ. 12·7 ಮತ ದೊರಕಿತ್ತು.

ಛೇಂಬರ್ ಆಫ್ ಡೆಪ್ಯೂಟೀಸ್‌ನಲ್ಲಿ ಕಮ್ಯೂನಿಸ್ಟರಿಗೆ 140 ಸ್ಥಾನಗಳೂ, ಸೋಷಲಿಸ್ಟರಿಗೆ 84 ಸ್ಥಾನಗಳೂ ದೊರಕಿವೆ.

ಸೆನೇಟಿನಲ್ಲಿ ಕ್ರಿಶ್ಚಿಯನ್ ಡೆಮಾಕ್ರಾಟರಿಗೆ 122 ಸ್ಥಾನಗಳೂ, ಕಮ್ಯೂನಿಸ್ಟರಿಗೆ 60 ಸ್ಥಾನಗಳೂ, ಸೋಷಲಿಸ್ಟರಿಗೆ 35 ಸ್ಥಾನಗಳೂ, ಉಳಿದ ಪಕ್ಷಗಳಿಗೆ 29 ಸ್ಥಾನಗಳೂ ದೊರಕಿವೆ.

ಕಮ್ಯೂನಿಸ್ಟರಿಗೆ ಮತ್ತು ಸೋಷಲಿಸ್ಟರಿಗೆ ಜನತೆ ಇತ್ತಿರುವ ಮತವು ಯುದ್ಧನೀತಿಗಳ ವಿರುದ್ಧವಾಗಿ, ರಾಷ್ಟ್ರಗಳ ನಡುವೆ ಸ್ನೇಹ ಸೌಹಾರ್ದಗಳಿಗಾಗಿ ಮತ್ತು ಇಟಲಿಯನ್ನು ಅಮೆರಿಕದ ಅಣು ಶಸ್ತ್ರ ನೆಲೆಯನ್ನಾಗಿ ಮಾಡುವುದಕ್ಕೆ ವಿರೋಧವಾಗಿ ಇತ್ತಿರುವ ಮತವಾಗಿದೆ. ಅಮೆರಿಕದಲ್ಲಿ ಈಗ ತಲೆದೋರಿರುವ ಆರ್ಥಿಕ ಮುಗ್ಗಟ್ಟು ಇಟಲಿಯ ಮೇಲೆ ಭಾರೀ ಪರಿಣಾಮವುಂಟುಮಾಡಿದೆ. ಇಟಲಿಯಲ್ಲಿ ಇದರಿಂದಾಗಿ ನಿರುದ್ಯೋಗಿಗಳ ಸಂಖ್ಯೆ ಏಕತೆರನಾಗಿ ಏರುತ್ತಿದೆ.

ಕಳೆದ ಚುನಾವಣೆಗಳಿಗಿಂತ ಕಮ್ಯೂನಿಸ್ಟ್ ಪಾರ್ಟಿಗೆ ಈ ಬಾರಿ ಒಂದೂವರೆ ಮಿಲಿಯ ಅಧಿಕ ಮತ ದೊರಕಿರುವುದು, ತೀವ್ರವಾದ ಅಪಪ್ರಚಾರಗಳ ಇದಿರಿನಲ್ಲಿ ಕಮ್ಯೂನಿಸ್ಟ್ ಪಕ್ಷದ ಬೆಳೆಯುತ್ತಿರುವ ಪ್ರಭಾವವನ್ನು ತೋರಿಸುತ್ತದೆ.

ಇಟಲಿಯ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಪಾಮಿರೋ ಟೋಗ್ಲಿಯಟ್ಟಿಯವರು ಚುನಾವಣಾ ಫಲಿತಾಂಶದ ಬಗ್ಗೆ ಇತ್ತಿರುವ ಹೇಳಿಕೆಯಲ್ಲಿ, ಕಮ್ಯೂನಿಸ್ಟ್ ಪಾರ್ಟಿಯು ರಾಷ್ಟ್ರೀಯ ಪಕ್ಷವಾಗಿದೆ, ಜನಪ್ರಿಯ ಶಕ್ತಿಯಾಗಿದೆ, ಕಾರ್ಮಿಕವರ್ಗ ಮತ್ತು ರೈತರ ನಡುವೆ ಪ್ರಬಲವಾಗಿದೆ ಎಂಬುದನ್ನು ತೋರಿಸಿಕೊಡುತ್ತದೆ ಎಂದು ತಿಳಿಸಿದ್ದಾರೆ. ಕಮ್ಯೂನಿಸ್ಟರ ಮತ್ತು ಸೋಷಲಿಸ್ಟರ ವಿಜಯವು ಎಡಪಕ್ಷಗಳ ಶಕ್ತಿಯು ಹೆಚ್ಚಿಸಿರುವುದನ್ನು ತೋರಿಸುತ್ತದೆ ಎಂದು ತಿಳಿಸಿದ್ದಾರೆ.

ಪಾಕೀಸ್ತಾನದ ರಣಹಕಳೆಯ ಹಿಂದೇನು ?

ಭಾರತ - ಪಾಕೀಸ್ಥಾನಗಳ ನಡುವಣ ಸಂಬಂಧ ವಿಪರೀತವಾಗಿ ಹದಗೆಡುತ್ತಿದೆ. ಶೀತ ಯುದ್ಧವು ಹೋಗಿ ನಿಜವಾದ ಯುದ್ಧದ ಭೀತಿ ಆವರಿಸಿದೆ. ಅಸ್ಸಾಂ ಮತ್ತು ಪಂಜಾಬ್ ಗಡಿಗಳಲ್ಲಿ ಆದ ಗಡಿ ಉಲ್ಲಂಘನೆಗಳೊಂದಿಗೆ, ಕಾಶ್ಮೀರವನ್ನು ಬಿಡಗಡೆ ಮಾಡಲು ಯುದ್ಧ ಹೂಡುವುದಾಗಿ ಪಾಕೀಸ್ಥಾನದ ನಾಯಕರು ಘೋಷಿಸುತ್ತಿದ್ದಾರೆ. ಇಂಥ ತೀವ್ರ ಪರಿಸ್ಥಿತಿಯಿಂದಾಗಿ ಹಿಮಾಲಯದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಪಂಡಿತ ನೆಹರೂರವರು ಹಿಂದೆ ತೆರಳಬೇಕಾಗಿ ಬಂದಿತು.

ಪಾಕೀಸ್ತಾನದ ಈ ಧಾಳಿಗಳ ಹಿನ್ನೆಲೆಯೇನು ಎಂಬುದನ್ನು ನೋಡುವುದಗತ್ಯ. ಭದ್ರತಾ ಸಮಿತಿಯಲ್ಲಿ ಕಾಶ್ಮೀರದ ಪ್ರಶ್ನೆಯ ಬಗ್ಗೆ ಗ್ರಹಾಂ ವರದಿಯು ಚರ್ಚೆಗೆ ಬರಲಿರುವುದರಿಂದ, ಅದಕ್ಕೆ ತಕ್ಕ ಉದ್ರಿಕ್ತ ವಾತಾವರಣವನ್ನು ಕಲ್ಪಿಸಲು ಪಾಕೀಸ್ತಾನದ ನಾಯಕರುಗಳು ಯತ್ನಿಸುತ್ತಿದ್ದಾರೆ.

ಪಾಕೀಸ್ತಾನಕ್ಕೆ ಕುಮ್ಮಕ್ಕು ಕೊಟ್ಟು ಎತ್ತಿ ಕಟ್ಟಿದ ಅಮೇರಿಕ ಬ್ರಿಟನ್ ಸಾಮ್ರಾಜ್ಯವಾದಿಗಳು ಇಂದು ಪೇಚಿನಲ್ಲಿದ್ದಾರೆ ಸಿಂಗ್ ಮಾನ್‌ರ್ಹೀಯಂತೆ ಪಾಕೀಸ್ತಾನದ ನಾಯಕರೂ ಸಹ ವರ್ತಿಸುತ್ತಿದ್ದಾರೆ.

ಈ ಪರಿಸ್ಥಿತಿಯನ್ನು ಕುರಿತು ಸೋವಿಯತ್ ಯೂನಿಯನ್ ಪಾಕೀಸ್ತಾನಕ್ಕೆ ತಲುಪಿಸಿರುವ ನಿವೇದನ :ಪತ್ರವು ವಾಸ್ತವ ಪರಿಸ್ಥಿತಿಯನ್ನು ವಿವರಿಸುತ್ತದೆ. "ಅಮೇರಿಕದ ನೆರವಿನಿಂದ ಪಾಕೀಸ್ತಾನದಲ್ಲಿ ಮಿಲಿಟರಿ ಸಿದ್ಧತೆಯನ್ನು ನಡೆಸುವುದು ತನ್ನ ರಕ್ಷಣಾದೃಷ್ಟಿಯಿಂದ ಅಗತ್ಯವಾದುದು ಎಂದು ಪಾಕೀಸ್ತಾನ ಸರಕಾರದ ವಕ್ತಾರರು ತಿಳಿಸುತ್ತಾರೆ. ನಿಜವಾಗಿ ಪಾಕೀಸ್ತಾನಕ್ಕೆ ಯಾರಿಂದಲೂ ಆಕ್ರಮಣದ ಭೀತಿಯಿಲ್ಲ ಅಮೆರಿಕವು ಪಾಕೀಸ್ತಾನದಲ್ಲಿ, ಕ್ಷಿಪಣಿ ಮತ್ತು ವಿಮಾನ ನಿಲ್ದಾಣಗಳು ಇತ್ಯಾದಿ ನೆಲೆಗಳನ್ನು ಪಡೆದಿರುವುದು ಪಾಕೀಸ್ತಾನದ ರಕ್ಷಣೆಗಲ್ಲ, ಆಕ್ರಮಣಕಾರೀ ಕೃತ್ಯಕ್ಕೆ ಎಂಬುದು ಸಹಜವಾಗಿದೆ. ಯಾವುದೇ ರಾಷ್ಟ್ರದ ಮೇಲೆ ಆಕ್ರಮಣಕಾರೀ ಕೃತ್ಯವೆಸಗದ ಸೋವಿಯತ್ ಸರಕಾರವು ಉಗ್ರಕ್ರಮ ತೆಗೆದುಕೊಂಡು ಆಕ್ರಮಣ ತಡೆಗಟ್ಟಬೇಕಾದೀತು" ಎಂದು ಆ ನಿವೇದನ ಪತ್ರದಲ್ಲಿ ತಿಳಿಸಲಾಗಿದೆ.

ಪಾಕೀಸ್ತಾನವು ಮೇಲಿನ ಅಂಶವನ್ನು ಅಲ್ಲಗಳೆದು, ಸೋವಿಯತ್ ಯೂನಿಯನ್ ಭಾರತದ ಪರವಾಗಿ ಏಕ ಪಕ್ಷೀಯವಾಗಿದೆ ಎಂದು ಟೀಕಿಸಿದೆ.

ಪಾಕೀಸ್ತಾನದಲ್ಲಿರುವ ಪ್ರಜಾಪ್ರಭುತ್ವ ಶಕ್ತಿಗಳು, ಸರಕಾರದ ಈ ಯುದ್ಧ ಕಹಳೆಯನ್ನು ಕೇಳಿ ಕಳವಳಗೊಂಡಿವೆ. ವಿವಾದಾಸ್ಪದವಾದ ಪ್ರಶ್ನೆಗಳನ್ನು ಇತ್ಯರ್ಥಗೊಳಿಸುವ ದೃಷ್ಟಿ ಅನುಸರಿಸುವ ಬದಲು ಪಾಕೀಸ್ತಾನದ ನಾಯಕರುಗಳು ಬಿಕ್ಕಟ್ಟನ್ನುಂಟುಮಾಡಲು ಯತ್ನಿಸುತ್ತಿವೆ.

ಕಾಶ್ಮೀರದ ಪ್ರಶ್ನೆಯ ಬಗ್ಗೆ ಭಾರತದ ನಿಲುವು ಸ್ಪಷ್ಟವಾಗಿದೆ. ಅಲ್ಲಿನ ಜನತೆ ಬಹುಮತದಿಂದ ಭಾರತಕ್ಕೆ ಸೇರಿಕೊಳ್ಳುವ ತೀರ್ಮಾನ ಮಾಡಿ ಈಗಾಗಲೇ ಪ್ರಶ್ನೆಯನ್ನು ಬಗೆಹರಿಸಿದೆ. ಸಾಮ್ರಾಜ್ಯಶಾಹಿಗಳಿಂದ ಪ್ರೇರಿತವಾಗಿರುವ ಪಾಕೀಸ್ತಾನದ ನಾಯಕರು, ಕಾಶ್ಮೀರದ ಪ್ರಶ್ನೆಯನ್ನು ರಾಜಕೀಯ ದೃಷ್ಟಿಯಿಂದ ಪಣವಾಗಿರಿಸಿಕೊಂಡಿದೆ.

ಪಾಕೀಸ್ತಾನದ ಪ್ರಚೋದಕ ಕೃತ್ಯಗಳನ್ನು ಭಾರತ ಸರಕಾರ ಖಂಡಿಸಿದೆ. ಇದೇ ಬಗೆಯಲ್ಲಿ ಮುಂದುವರಿದಲ್ಲಿ ಉಗ್ರಕ್ರಮ ತೆಗೆದುಕೊಳ್ಳಬೇಕಾಗುವುದೆಂದು ಎಚ್ಚರಿಕೆ ಕೊಡಲಾಗಿವೆ. ಪಾಕೀಸ್ತಾನದ ನಾಯಕರು ಅಚಾತುರ್ಯಗಳಿಗೆ ಅವಕಾಶ ಕೊಡದೆ ವರ್ತಿಸುವರೆಂದು ಒತ್ತಾಯ ಪಡಿಸಬೇಕಾಗಿದೆ.

ಕೇರಳ ವಿದ್ಯಾಮಸೂದೆ ತಿರಸ್ಕರಿಸಲ್ಪಡುವುದೆ?

ಸುಪ್ರೀಂ ಕೋರ್ಟಿನ ತೀರ್ಪು ಹೊರಬಿದ್ದ ನಂತರ ವಿವಾದಾಸ್ಪದವಾಗಿದ್ದ, ಇಡೀ ಭಾರತದ ಗಮನವನ್ನು ಸೆಳೆದಿದ್ದ ಕೇರಳ ವಿದ್ಯಾಭ್ಯಾಸ ಮಸೂದೆ ಹೊಸ ಘಟ್ಟವನ್ನು ಮುಟ್ಟಿತು.

ಕೇರಳ ರಾಜ್ಯ ವಿದ್ಯಾ ಸಚಿವ ಜೋಸೆಫ್ ಮುಂಡಶೇರಿಯವರು ಸುಪ್ರೀಂ ಕೋರ್ಟಿನ ತೀರ್ಪಿನ ಆಧಾರದ ಮೇಲೆ ಮಸೂದೆಯಲ್ಲಿ ಸೂಕ್ತ ಬದಲಾವಣೆಯನ್ನು ಮಾಡಿ ಜಾರಿಗೆ ತರಲಾಗುವುದೆಂದು ತಿಳಿಸಿದರು ಸಾಮಾನ್ಯವಾಗಿ ಅನುಸರಿಸುವ ಕ್ರಮ ಇದು. ಕೇರಳ ಸರಕಾರವು ರಾಷ್ಟ್ರಾಧ್ಯಕ್ಷರಿಂದ ಮಸೂದೆಯು ಟೀಕೆ ಮತ್ತು ಸಲಹೆಗಳೊಡನೆ ವಾಪಸಾಗುವುದೆಂದು ನಿರೀಕ್ಷಿಸುತ್ತಿತ್ತು.

ಆದರೆ ಈಚೆಗೆ ಬಂದಿರುವ ವರದಿಗಳಂತೆ, ರಾಷ್ಟ್ರಾಧ್ಯಕ್ಷರು ಪೂರ್ಣವಾಗಿ ಮಸೂದೆಯನ್ನು ತಿರಸ್ಕರಿಸುವ ಸಂಭವವಿದೆ. ರಾಜ್ಯಾಂಗ ಘಟನೆಯ 201 ನೆಯ ವಿಧಿಯ ಪ್ರಕಾರ ರಾಷ್ಟ್ರಾಧ್ಯಕ್ಷರು ಸುಪ್ರೀಂ ಕೋರ್ಟಿನ ಅಭಿಪ್ರಾಯದ ಮೇಲೆ ಮಸೂದೆಗೆ ಸಮ್ಮತಿ ಈಯುವುದನ್ನು ತಡೆಹಿಡಿಯಬಹುದು, ಇಲ್ಲವೆ ತಮ್ಮ ಸಲಹೆಗಳೊಂದಿಗೆ ಮಸೂದೆಯಲ್ಲಿ ತಿದ್ದುಪಡಿಗಳನ್ನು ಮಾಡಲು ಶಾಸನ ಸಭೆಗೆ ಹಿಂದೆ ಕಳಿಸಬಹುದು. ಈಗ ತಿಳಿದುಬಂದಿರುವಂತೆ ರಾಷ್ಟ್ರಾಧ್ಯಕ್ಷರು ಎರಡನೆಯ ಕ್ರಮವನ್ನು ಅನುಸರಿಸುವುದಿಲ್ಲವೆಂದು ಗೊತ್ತಾಗಿದೆ. ಅಂದರೆ ಕೇರಳ ರಾಜ್ಯಸರಕಾರವು ಮತ್ತೆ ಪುನಃ ಮೊದಲಿನಿಂದ ಮಸೂದೆಯನ್ನು ಹೊಸ ಮಸೂದೆಯಾಗಿ ಶಾಸನ ಸಭೆಯಲ್ಲಿ ಮಂಡಿಸಬೇಕಾಗುವುದು. ರಾಷ್ಟ್ರಾಧ್ಯಕ್ಷರು ಈ ಬಗ್ಗೆ ಅನುಸರಿಸಲಿರುವ ನೀತಿ ವಿಚಿತ್ರವಾಗಿದೆ. ಪುರೋಗಾಮಿ ಸುಧಾರಣೆಗಳನ್ನು ತರಬಯಸುವ ಕಾಯಿದೆಗಳ ಬಗ್ಗೆ ಕೇಂದ್ರ ಸರಕಾರ ಅನುಸರಿಸುವ ಧೋರಣೆಯು ಈ ಘಟನೆಯಿಂದ ಚೆನ್ನಾಗಿ ವ್ಯಕ್ತಗೊಂಡಿದೆ.

ಜಯಪ್ರಕಾಶರ ಬಯಕೆ

ಭೂದಾನ ಕಾರ್ಯಾರ್ಥಿಯಾಗಿ ವಿಶ್ವ ಪರ್ಯಟನ ಮಾಡುತ್ತಿರುವ ಜಯಪ್ರಕಾಶರು ಲಂಡನ್ನಿನಲ್ಲಿ ಮಾತನಾಡುತ್ತ ಜರೂರು ಪರಿಸ್ಥಿತಿ ಉದ್ಭವಿಸಿದಲ್ಲಿ ಭಾರತದ ನಾಯಕತ್ವವನ್ನು ವಹಿಸಲು ತಾವು ಸಿದ್ಧವಿರುವುದಾಗಿ ಘೋಷಿಸಿದ್ದಾರೆ.

ನಾಲ್ಕಾರು ಬಾರಿ ರಾಜಕೀಯವನ್ನು ಪರಿತ್ಯಜಿಸಿ ಮತ್ತೆ ಹಿಂದೆ ರಾಜಕಾರಣಕ್ಕೆ ಬರುತ್ತಲೇ ಇರುವ ಜಯಪ್ರಕಾಶರಿಗೆ ಲಂಡನ್ನಿಗೆ ಹೋಗಿ ಮೇಲಿನ ಹೇಳಿಕೆ ಕೊಡುವ ಅಗತ್ಯವೇನಿತ್ತು ಎಂಬುದು ತಿಳಿಯದಾಗಿದೆ. ಈ ವಿಷಯವನ್ನು ಜಯಪ್ರಕಾಶರೇ ವಿವರಿಸಬೇಕಾಗಿದೆ.

ಸಂಪೂರ್ಣವಾಗಿ ಭೂಧಾನಕ್ಕೆ ತಮ್ಮ ಕಾಲವನ್ನು ಅರ್ಪಿಸಿರುವ ಜಯಪ್ರಕಾಶರಿಗೆ ಭಾರತದಲ್ಲಿ ಜರೂರು ಪರಿಸ್ಥಿತಿ ಉದ್ಭವಿಸುವ ಕನಸು ಹೇಗೆ ಕಂಡಿತೋ. ನೆಹರೂರನಂತರ ತಾವೇ ಅವರ ಜಾಗಕ್ಕೆ ಅರ್ಹರು ಎಂದು ಹಲವು ರೀತಿಗಳಲ್ಲಿ ಅವರು ಈವರೆಗೆ ವ್ಯಕ್ತಗೊಳಿಸಿದ್ದಾರೆ. ಆರಂಭದಿಂದಲೂ ಜಯಪ್ರಕಾಶರ ರಾಜ

(೯ನೇ ಪುಟ ನೋಡಿ)

ಶ್ರಮಿಕ ವರ್ಗದ ಮುನ್ನಡೆ

★

ಹೋರಾಟ ಹಾಗೂ ವಿಜಯಗಳಿಂದ ಕೂಡಿದ

ಮಂಗಳೂರು ಹಂಚಿನ ಮಜೂರರ ಸಂಘ

— ಹದಿನೈದು ವರುಷಗಳ ಸಫಲ ಸಾಧನೆ —

ಮಂಗಳೂರು ಹಂಚಿನ ಮಜೂರರ ಸಂಘದ 15ನೇ ವಾರ್ಷಿಕ ಮಹಾಸಭೆಯು ಕಳೆದ ತಾ. 18-5-58ರಂದು ಎಸ್.ಕೆ.ಸಿ.ಸಿ. ಬ್ಯಾಂಕಿನ ಮಾಳಿಗೆಯಲ್ಲಿ ಸಂಘದ ಅಧ್ಯಕ್ಷ ಬಿ. ನಾರಾಯಣರವರ ಅಧ್ಯಕ್ಷತೆಯಲ್ಲಿ ಜರುಗಿತು.

ಕಾರ್ಯದರ್ಶಿ ಶ್ರೀ ಎಚ್. ಉಮಾನಾಥ ನಾಯಕರು ಸಂಘದ ವಾರ್ಷಿಕ ವರದಿಯನ್ನು ಒಪ್ಪಿಸಿದರು. ಈ ವರದಿಯಲ್ಲಿ ಕಳೆದ ವರ್ಷ ಯೂನಿಯನ್ ನಡೆಸಿದ ಚಟುವಟಿಕೆಗಳು ಮತ್ತು ಮಜೂರರಿಗೆ ವೈಯುಕ್ತಿಕವಾಗಿಯೂ, ಸಾಮೂಹಿಕವಾಗಿಯೂ ದೊರೆತ ಜಯಗಳನ್ನು ವಿವರಿಸಲಾಗಿತ್ತು. ಮೂಲಕೂಲಿಯಲ್ಲಿ ಹೆಚ್ಚಳ, ಸರ್ವಿಸ್, ಸಂಬಳ ಕ್ರಮ ಜ್ಯಾರಿ, ಹೆರಿಗೆ ಭತ್ತೆ ಕಾನೂನಿನ ತಿದ್ದುಪಡಿ ಇವೇ ಮೊದಲಾದ ಕೇಳಿಕೆಗಳನ್ನು ಮಾಲಿಕರ ಮತ್ತು ಸರಕಾರದ ಮುಂದಿಟ್ಟು ನಡೆಸಿದ ಚಳವಳಿಯ ಪರಿಣಾಮವಾಗಿ ಕಳೆದ ಜನವರಿ ತಿಂಗಳಲ್ಲಿ ಮಜೂರರ ಸಂಘ ಮತ್ತು ಮಾಲಕರೊಳಗೆ ಆಗಿರುವ ಒಪ್ಪಂದದ ಪ್ರಕಾರ ಮಜೂರರಿಗೆ 31-12-57ರಿಂದ ಮೂಲ ಕೂಲಿಯಲ್ಲಿ ಒಂದಾಣೆ ಭಡ್ತಿ, ಮಂಗಳೂರಿನ ಜೀವನ ವೆಚ್ಚದ ತಖ್ತೆಯು ಲೆಕ್ಕವನ್ನು ಪ್ರಕಟಿಸುವವರೆಗೆ ಪಾಯಿಂಟ್ 325 ರಂತೆ ತುಟ್ಟಿ ಬತ್ತೆ, ಮಳೆಗಾಲದ ನಾಲ್ಕು ತಿಂಗಳ ಹೊರತು ಕಾರ್ಖಾನೆಗಳು ಮುಚ್ಚಲ್ಪಟ್ಟರೆ ಪರಿಹಾರ ಕೊಡಬೇಕು, ಒಪ್ಪಂದಕ್ಕೆ, ಒಳಪಟ್ಟಿರುವ ವರುಷಗಳಿಗೆ ಪ್ರತಿ ವರುಷ ಮೂರು ತಿಂಗಳ ಬೋನಸ್ಸು, ವರುಷದಲ್ಲಿ ವಿಶೇಷ ದಿನಗಳ ಪೈಕಿ ಐದು ದಿವಸಗಳ ಸಂಬಳ ಸಮೇತ ರಜೆ, ಮತ್ತು ಹತ್ತು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಸರ್ವಿಸು ಇರುವ ಮಜೂರನು ಕೆಲಸದಿಂದ ನಿವೃತ್ತನಾಗುವಾಗ, ಪ್ರತಿ ವರ್ಷಕ್ಕೆ 15 ದಿನಗಳಷ್ಟು ಮೂಲ ಕೂಲಿಯನ್ನು ಕೊಡಬೇಕೆನ್ನುವ ಶರ್ತಗಳು ಜಾರಿಗೆ ತರುವುದಾಗಿ ಮಾಲಿಕರು ಒಪ್ಪಿಕೊಂಡಿದ್ದಾರೆಂದು ಈ ವರದಿಯಲ್ಲಿದೆ. ನಂತರ ಈ ವರ್ಷದಲ್ಲಿ ಮಜೂರರು ನಡೆಸಿರುವ ಮುಖ್ಯ ಹೋರಾಟಗಳನ್ನು ವಿವರಿಸಿ, ಸಂಘದ ಸದಸ್ಯರ ಸಂಖ್ಯೆಯು ಕಳೆದ ಎರಡು ವರ್ಷಗಳಿಂದ ಹೆಚ್ಚಿದೆಯೆಂದೂ ಈ ವರ್ಷದಲ್ಲಿ 3373 ಮಂದಿ ಪೂರ್ಣ ವರ್ಗಣಿ ಕೊಟ್ಟ ಸದಸ್ಯರಿರುವರೆಂದೂ ವರದಿ ಹೇಳಿದೆ. ಇದೇ ವೇಳೆ ಯೂನಿಯನ್ ಸ್ವಂತವಾಗಿ ಶ್ರಮಕ್ಕೆ ತೆಗೆದುಕೊಂಡ ಜಾಗದಲ್ಲಿ ತನ್ನದೇ ಆದ ಕಟ್ಟಡ ಕಟ್ಟಿಸುತ್ತಿರುವುದನ್ನು ಪ್ರಸ್ತಾಪಿಸಿ ಈ ಕೆಲಸದಲ್ಲಿ ಧನಸಹಾಯ ಮತ್ತು ಶ್ರಮದಾನದ ರೂಪದಿಂದ ಸಹಕರಿಸಿದ ಮಜೂರರನ್ನು ಈ ವರದಿಯಲ್ಲಿ ಅಭಿನಂದಿಸಲಾಗಿದೆ.

ಮುಂದಿನ ವರ್ಷದ ಬಗ್ಗೆ ಸಂಬಳ ಸಹಿತ ವಾರದ ರಜೆ, ಮಂಗಳೂರಿನ ಜೀವನ ವೆಚ್ಚದ ತಖ್ತೆಯನ್ನು ಮೈಸೂರು ಸರಕಾರ ಕೂಡಲೇ ಪ್ರಕಟಿಸಬೇಕೆನ್ನುವ, ಹಂಚಿನ ಕೈಗಾರಿಕೆಯಲ್ಲಿ ದುಡಿಯುವ ಮಜೂರರಿಗೆ ಕನಿಷ್ಠ ವೇತನ ನಿರ್ಣಯಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ, ಕೇರಳ ರಾಜ್ಯದ ಕಾಯಿದೆಯ ರೂಪದಲ್ಲಿ ಹೆರಿಗೆ ಭತ್ತೆ ಕಾನೂನಿನ ತಿದ್ದುಪಡಿಯಾಗಬೇಕೆನ್ನುವ, ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕೆನ್ನುವ, ಪ್ರಾವಿಡೆಂಡ್ ಫಂಡಿನ ಕೇಂದ್ರ ಆಫೀಸಿನ ಬ್ರಾಂಚೊಂದನ್ನು ಮಂಗಳೂರಲ್ಲಿ ತೆರೆಯಬೇಕೆನ್ನುವ ಮತ್ತು ಕೋಮನ್ ವೆಲ್ತ್, ಮೋರ್ಗನ್ ಹಂಚಿನ ಕಾರ್ಖಾನೆಯ ಮಜೂರರಿಗೆ ಸಂಬಂಧಿಸಿದ ಕೇಳಿಕೆಗಳನ್ನೊಳಗೊಂಡ ಹಲವು ಠರಾವುಗಳ ಮೇಲೆ ತಮ್ಮ ಸಲಹೆ ಸೂಚನೆಗಳನ್ನಿತ್ತು ಸುಮಾರು 25ಕ್ಕಿಂತಲೂ ಹೆಚ್ಚು ಮಂದಿ ಸಭೆಯಲ್ಲಿ ಮಾತನಾಡಿದ ಬಳಿಕ ಸರ್ವಾನುಮತದಿಂದ ಸ್ವೀಕೃತವಾಯಿತು.

1948ರಲ್ಲಿ ಹಂಚಿನ ಕಾರ್ಖಾನೆಗಳ ಮಾಲಿಕರಿಗೂ-ದೋಣಿಯಲ್ಲಿ ಮಣ್ಣು ಸಾಗಿಸುವ ಮಜೂರರ ಸಂಘಕ್ಕೂ ಆಗಿರುವ ಒಪ್ಪಂದ ಪ್ರಕಾರ ಮಾಲಿಕರು ಕೊಡಲೊಪ್ಪಿರುವ ಕೂಲಿಯಲ್ಲಿ ಕಡಿತ ಮಾಡಿರುವುದನ್ನು ತೀವ್ರವಾಗಿ ಖಂಡಿಸಿ ಕಡಿತ ಮಾಡಲ್ಪಟ್ಟ ಮಜೂರಿಯನ್ನು ಕೂಡಲೇ ಭರ್ತಿಮಾಡಬೇಕೆನ್ನುವ ಠರಾವೊಂದನ್ನು ಕೂಡಾ ಸಭೆಯು ಅಂಗೀಕರಿಸಿತು. ಸಭೆಯಲ್ಲಿ ಶ್ರೀಗಳಾದ ಎ. ಶಾಂತಾರಾಂ ಪೈ, ಕೆ. ಮೋನಪ್ಪಶೆಟ್ಟಿ ಬಿ. ಲಿಂಗಪ್ಪ ಸುವರ್ಣ ಮೊದಲಾದವರು ಮಾತಾಡಿ ಹಂಚಿನ ಮಜೂರರು ಹೋರಾಡಿ ಪಡೆದಷ್ಟು ಸವಲತ್ತುಗಳನ್ನು ಬೇರೆ ವಿಭಾಗದ ಮಜೂರರು ಪಡೆದಿಲ್ಲವೆಂದೂ ಇದಕ್ಕೆ ಹಂಚಿನ ಮಜೂರರ ಸಂಘದ ಐಕ್ಯತೆಯೇ ಕಾರಣವೆಂದೂ ಮಜೂರರಲ್ಲಿ ಅನೈಕ್ಯವನ್ನು ಬಿತ್ತುವವರ ಯತ್ನಗಳನ್ನು ಶಕ್ತಿವತ್ತಾಗಿ ಪ್ರತಿಭಟನೆ ನಿಮ್ಮ ಒಗ್ಗಟ್ಟಿನ ಶಕ್ತಿಯನ್ನು ಬೆಳೆಸಿ ಇಂದಿನ ಸಭೆಯಲ್ಲಿ ತೀರ್ಮಾನವಾಗಿರುವ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಬೇಕೆಂದು ಕೇಳಿಕೊಂಡರು.

ಈ ಸಂಘದ ಕಾರ್ಯಕ್ಷೇತ್ರವು ಇಷ್ಟರತನಕ ಮಂಗಳೂರು ಮಾತ್ರವಾಗಿದ್ದು ಮುಂದಕ್ಕೆ ಇಡೀ ಜಿಲ್ಲೆಗೆ ವಿಸ್ತರಿಸುವಂತೆ ಘಟನೆಯಲ್ಲಿ ತಿದ್ದುಪಡಿ ಮಾಡಲಾಯಿತು.

ಮುಂದಿನ ವರ್ಷಕ್ಕೆ ಶ್ರೀ ಬಿ. ನಾರಾಯಣ (ಅಧ್ಯಕ್ಷ) ಶ್ರೀಗಳಾದ ಜೆ. ಕೋಟಪ್ಪ, ಕೆ. ದೇವು, ಮತ್ತು ಸಿಂಸನ್ ಸೋನ್ಸ್, (ಉಪಾಧ್ಯಕ್ಷರು) ಎಚ್. ಉಮನಾಥನಾಯಕರು (ಪ್ರಧಾನ ಕಾರ್ಯದರ್ಶಿ) ಶ್ರೀಗಳಾದ ಬಿ. ವಿಶ್ವನಾಥ, ಬಿ. ಶೀನ, (ಉಪಕಾರ್ಯದರ್ಶಿಗಳು) ಎ. ಶಾಂತಾರಾಂ ಪೈ, (ಕೋಶಾಧಿಕಾರಿ) ಮತ್ತು 31 ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಕೇರಳದಲ್ಲಿ....

ಭೂಮಿಯನ್ನು ಫಲಭರಿತವಾಗಿಸುವುದಕ್ಕಾಗಿ ಯೋಜನೆ

ಕೇರಳದ ವ್ಯವಸಾಯ ಶಾಖೆಯನ್ನೂ ನೋಡಿಕೊಳ್ಳುವ ಆರ್ಥಿಕ ಮಂತ್ರಿ ಶ್ರೀ ಅಚ್ಚುತ ಮೆನನ್‌ರು ಭೂಮಿಯನ್ನು ಫಲಭರಿತವಾಗಿರಿಸುವುದಕ್ಕಾಗಿ ಹೊಸದೊಂದು ಯೋಜನೆ ಹಾಕಿದ್ದಾರೆ. ಭೂಮಿಯನ್ನು ನೈಟ್ರೋಜನ್ ಅಂಗದಿಂದ ತುಂಬಿ ಫಲಭರಿತವಾಗಿಸುವದಕ್ಕಾಗಿ ಹಸಿರು ಗೊಬ್ಬರದ ಅಗತ್ಯವನ್ನು ಒತ್ತಿ ಹೇಳಿದ ಮಂತ್ರಿ ಹೊಸ ಯೋಜನೆಯ ಬಗ್ಗೆಯೂ ತಿಳುಹಿಸಿದರು.

ವಿದೇಶಿ ವಿನಿಮಯವನ್ನು ಕಡಮೆಗೊಳಿಸುವದಕ್ಕಾಗಿಯೂ, ಆಹಾರ ಧಾನ್ಯಗಳ ಬೆಳೆಯ ಹೆಚ್ಚಳಕ್ಕಾಗಿಯೂ ಇದು ಅಗತ್ಯವೆಂದು ಒತ್ತಿ ಹೇಳಿದ ಸಚಿವರು "ಗ್ಲಿರಿಸಿಡಿಯಾ" ಸ್ಥಾವರದ ಸ್ಥಾಪನೆಯ ಕಾಲಕ್ಕೆ ಐದು ವರುಷದ ಯೋಜನೆಯನ್ನೂ ತಿಳುಹಿಸಿದರು. ಎರ್ನಾಕುಲಂನ ಕಲೆಕ್ಟರ್ ಕಛೇರಿಯ ಆವರಣದಲ್ಲಿ ಈ ಸ್ಥಾವರ ಸ್ಥಾಪಿತವಾಯಿತು. 'ಗ್ಲಿರಿಸಿಡಿಯಾ'ವು ತೆಂಗು ಬತ್ತ ಮತ್ತಿನ್ನಿತರ ಆಹಾರ ಪದಾರ್ಥಗಳನ್ನು ಸಮೃದ್ಧವಾಗಿ ಬೆಳೆಸಲು ಸಹಾಯಕನಾಗುವ ಗೊಬ್ಬರ.

ಕೇರಳ ಸರ್ಕಾರವು ಮುಂದಿನ ಐದು ವರುಷಗಳಲ್ಲಿ ಇಂಥ ಗ್ಲಿರಿಸಿಡಿಯಾ ಸ್ಥಾವರಗಳನ್ನು ಕೇರಳ ರಾಜ್ಯದಲ್ಲಿ 26 ಕೋಟಿಗಳಷ್ಟನ್ನು ಸ್ಥಾಪಿಸಬೇಕೆಂದು ಯೋಚಿಸಿದೆ. ರಾಸಾಯನಿಕ ಗೊಬ್ಬರಗಳನ್ನು ಕೊಳ್ಳಲಿಕ್ಕಾಗದ ರೈತರಿಗೆ ಗ್ಲಿರಿಸಿಡಿಯಾ ಗೊಬ್ಬರ ಹೆಚ್ಚು ಪ್ರಯೋಜನವಾಗಲಿದೆ.

ಉಚಿತವಾಗಿ ಕಾನೂನು ಸಹಾಯ

ಕೇರಳದ ಕಮ್ಯೂನಿಸ್ಟ್ ಸರಕಾರವು ಕಾರ್ಮಿಕ ವರ್ಗದ ನೆರವಿಗೆ ಉಚಿತವಾಗಿ ಕಾನೂನಿನ ಸಹಾಯನೀಡುವುದಕ್ಕೆ ಪೂರ್ಣಾವಧಿಯ ಸರಕಾರಿ ವಕೀಲರನ್ನು ನಿಯಮಿಸಿದೆ. ಈ ವಕೀಲರು ಟ್ರೇಡ್ ಯೂನಿಯನ್‌ಗಳು ಔದ್ಯೋಗಿಕ ಟ್ರಿಬ್ಯೂನಲ್‌ಗಳಲ್ಲಿ ತಮ್ಮ ದಾವಾಗಳನ್ನು ಹೂಡಲು ನಡೆಸಲು ಉಚಿತ ಸಹಾಯ ನೀಡುವರು.

ಈ ವಕೀಲರು ಸ್ಥಳೀಯ ಸರಕಾರದ ವಕೀಲರುಗಳಿಗೆ ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಿದ ಅಥವಾ ಮಾಲೀಕರೊಪ್ಪಿಕೊಂಡಿರುವ ಇಲ್ಲವೆ ಅವಾರ್ಡುಗಳ ಅನ್ವಯದಲ್ಲಿ ನಡೆದಿರುವ ಅನ್ಯಾಯಗಳ ವಿಷಯದಲ್ಲೂ ಸಲಹೆನೀಡುವರು.

ಕೆಲಸ ಕಳೆದುಕೊಂಡ ಅಥವಾ ಕೆಲಸದಿಂದ ಹೊರತಳ್ಳಲ್ಪಟ್ಟ ಕಾರ್ಮಿಕರಿಗೆ ಆರ್ಥಿಕ ನೆರವು ನೀಡುವ ಯೋಜನೆಯೊಂದನ್ನು ಸರ್ಕಾರ ಆಗಲೇ ಜಾರಿಯಲ್ಲಿ ತಂದಿದೆ.

"ಕಾರ್ಮಿಕರು ತಮ್ಮ ನ್ಯಾಯವಾದ ಮತ್ತು ಕಾನೂನು ಬದ್ಧವಾದ ಹಕ್ಕುಗಳನ್ನು ಪಡೆಯುವಲ್ಲಿ ಈ ಕ್ರಮಗಳು ಬೆಂಬಲವನ್ನೂ ಸಹಾಯವನ್ನೂ ನೀಡುವಂಥವಿವೆ" ಎಂದು ಕೇರಳ ಸರಕಾರದ ಪ್ರಕಟಣೆ ತಿಳುಹಿಸಿದೆ.

ಪ್ರತಿಗಾಮಿ ಭೂಶಾಸನಕ್ಕೆ ವಿರೋಧವಾಗಿ ಸತ್ಯಾಗ್ರಹ !

ಆಂಧ್ರ ಪ್ರದೇಶದ ಕಮ್ಯೂನಿಸ್ಟ್ ಪಕ್ಷವು ಯೋಜಿತ ಭೂಸುಧಾರಣಾ ಕಾನೂನಿನ ವಿರುದ್ಧ ರಾಜ್ಯದಾದ್ಯಂತ ಚಳವಳವನ್ನಾರಂಭಿಸಲಿದೆ.

ಪಶ್ಚಿಮ ಗೋದಾವರಿಯ ಕೋಡಮಂಚಿಲ್ಲಿಯಲ್ಲಿ ಮೇ 30ರಿಂದ ಜೂನ್ 3ರ ವರೆಗೆ ಸೇರಿದ್ದ ಸಭೆಯಲ್ಲಿ ಗೊತ್ತುವಳಿಯೊಂದನ್ನು ಅಂಗೀಕರಿಸಿ ಈ ಭೂಸುಧಾರಣೆ 'ಪ್ರತಿಗಾಮಿ' ಸ್ವರೂಪದ್ದಾಗಿದೆ ಎಂದು ಸ್ಪಷ್ಟವಾಗಿ ಸಾರಿತು.

ಯೋಜಿತ ಭೂಸುಧಾರಣಾ ಕಾನೂನಿನಿಂದ ಭೂರಹಿತ ಹಾಗೂ ಕೆಲಸರಹಿತರಾಗಿರುವ ರೈತರಿಗೂ ಬೇಸಾಯದ ಕೂಲಿಗಳಿಗೂ ಯಾವ ಪ್ರಯೋಜನವೂ, ಫಲವೂ ದೊರೆಯದೆಂದೂ ಅವರ ಸ್ಥಿತಿಯನ್ನು ಇನ್ನೂ ಕೆಳಮಟ್ಟಕ್ಕೆ ತಳ್ಳುವದೆಂದೂ ಗೊತ್ತುವಳಿ ಹೇಳಿದ್ದು ತೆಲಂಗಾಣ ರೈತರ ಅತ್ಯಂತ ವೀರ ಹಾಗೂ ಕಟುಹೋರಾಟದ ಬಳಿಕವೂ ರೈತರಿಗೆ ಇಂಥ ಕಾನೂನು ಬರುತ್ತಿರುವುದು ಅಸಮಾಧಾನಕರವಾದುದೆಂದೂ ಹೇಳಿದೆ.

ಅಕ್ಟೋಬರ್ ನವೆಂಬರ್ ತಿಂಗಳುಗಳಲ್ಲಿ ತಾಲೂಕು, ಜಿಲ್ಲೆ, ಮತ್ತು ರಾಜ್ಯಮಟ್ಟದ ಪಕ್ಷದ ಘಟಕಗಳಲ್ಲಿ ಸಮ್ಮೇಲನಗಳನ್ನು ನಡೆಸಿ ಆಂಧ್ರ ರಾಜ್ಯದಲ್ಲಿ ಸಂಘಟಣೆಯನ್ನು ಬಲಗೊಳಿಸಲು ಕ್ರಮ ಕೈಕೊಳ್ಳಲಾಗುವುದು.

ಭದ್ರಾವತಿಯಲ್ಲಿ ಅಭಿನಂದನೆ—ಖಂಡನೆ

ತಾ. 30—5—58ನೇ ಶುಕ್ರವಾರ ಸಾಯಂಕಾಲ 6 ಗಂಟೆಗೆ ಭದ್ರಾವತಿ ತಾಲೂಕು ಕಮ್ಯೂನಿಸ್ಟ್ ಪಾರ್ಟಿ ಸಮಿತಿ ಸಭೆ ಸೇರಿ ಕೆಳಗಿನಂತೆ ತೀರ್ಮಾನ ಮಾಡಿತು :

1) ಕೇರಳ ವಿಧಾನ ಸಭೆಗೆ ದೇವಿಕುಳಂ ಉಪಚುನಾವಣೆಯಲ್ಲಿ ಪ್ರಬಲವಾದ ವಿರುದ್ಧವಿದ್ದರೂ ಶ್ರೀಮತಿ ರೋಸಮ್ಮ ಪೊನ್ನೂಸ್‌ರವರನ್ನೇ ಮತ್ತೆ ಚುನಾಯಿಸಲ್ಪಟ್ಟದ್ದಕ್ಕೆ ಕೇರಳದ ಕಮ್ಯೂನಿಸ್ಟ್ ಪಾರ್ಟಿಗೂ ಮತ್ತು ಮಹಾಜನಗಳಿಗೂ ಈ ಸಭೆಯು ಅಭಿನಂದನೆ ಸಲ್ಲಿಸುತ್ತದೆ.

2) ಜಮ್‌ಷೆಡ್‌ಪುರ 'ಟಿಸ್ಕೊ' ಕಾರ್ಮಿಕರ ಮೇಲೆ ಗುಂಡು ಹಾರಿಸಿದ ಸರಕಾರದ ಭಂಡವಳಶಾಹೀ ನೀತಿಯನ್ನೂ ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ. ಮತ್ತು ಗೋಲಿಬಾರಿನ ಬಹಿರಂಗ ವಿಚಾರಣೆ ನಡೆಸಬೇಕೆಂದು ಬಿಹಾರ ಸರಕಾರವನ್ನು ಒತ್ತಾಯಪಡಿಸುತ್ತದೆ.

ಹೊಟೇಲ್ ಮಜದೂರ್ ಸಭೆಯ ವಾರ್ಷಿಕ ಸಭೆ

ಬೊಂಬಾಯಿಯ ಹೊಟೇಲ್ ಮಜ್ದೂರ್ ಸಭೆಯ 8ನೇ ವಾರ್ಷಿಕ ಸಭೆಯು ಮೇ 31ರಂದು ಸಭೆಯ ಉಪಾಧ್ಯಕ್ಷರಾದ ಕಾಂ|| ಭಗತ್‌ಸಿಂಗ್‌ರವರ ಅಧ್ಯಕ್ಷತೆಯಲ್ಲಿ ನಡೆದು ಹೊಸ ವರುಷಕ್ಕೆ ಅಧಿಕಾರಿಗಳ

(೮ನೇ ಪುಟ ನೋಡಿ)

ಅಲ್ಜೀರಿಯಾ ಆರ್ಥಿಕವಾಗಿ, ನೈತಿಕವಾಗಿ, ರಾಜಕೀ

ಫ್ರೆಂಚ್ ಜಿಗಳೆಗಳಿಂದ ಹೀರಲ್ಪಟ್ಟಿದೆ

ಶೋಷಕ ಫ್ರೆಂಚರ ದುರುಳ ಕತೆ

ಉತ್ತರ ಆಫ್ರಿಕೆಯ ಹೃದಯದ ಸ್ಥಳದಲ್ಲಿರುವ ಅಲ್ಜೀರಿಯಾ ಸುಮಾರು 1830ರವರೆಗೂ ಸ್ವತಂತ್ರ ಸಾರ್ವಭೌಮ ರಾಜ್ಯವಾಗಿತ್ತು. ಅದರ ಗಡಿ ಸ್ಪಷ್ಟವಾಗಿತ್ತು. ಅದು ಬೇರೆ ರಾಷ್ಟ್ರಗಳೊಡನೆ ರಾಜಕೀಯ ಸಂಬಂಧಗಳನ್ನು ಇಟ್ಟುಕೊಂಡಿತ್ತು, ಅರಬ್ ರಾಷ್ಟ್ರಗಳೊಡನೆಯಂತೂ ಸ್ವಾಭಾವಿಕವಾಗಿ ಅದಕ್ಕೆ ಕೌಟುಂಬಿಕ ಸಂಬಂಧವಿತ್ತು.

ಇಷ್ಟೇ ಅಲ್ಲದೆ, ಇಂಗ್ಲಂಡ್, ಸ್ಪೇನ್, ಹಾಲೆಂಡ್, ಡೆನ್‌ಮಾರ್ಕ್ ಮತ್ತು ಪೋರ್ಚುಗಾಲ್‌ನಂತಹ ಐರೋಪ್ಯ ರಾಷ್ಟ್ರಗಳೊಡನೆ ಅನೇಕ ಒಡಂಬಡಿಕೆಗಳನ್ನು ಮಾಡಿಕೊಂಡಿತ್ತು.

೫೭ ಸಲ ಮನ್ನಣೆ !

ಇಲ್ಲಿ ತಮಾಷೆಯಾಗಿರುವ ವಿಷಯವೊಂದಿದೆ. ಕ್ರಿ. 1619-1830ರ ಕಾಲಾವಧಿಯಲ್ಲಿ ಫ್ರಾನ್ಸ್ ಅಲ್ಜೀರಿಯಾದೊಂದಿಗೆ ಸ್ನೇಹ ಹಾಗು ಬಾಂಧವ್ಯಗಳ ೫೭ ಒಡಂಬಡಿಕೆಗಳನ್ನು ಮಾಡಿಕೊಂಡಿತ್ತು ಇಷ್ಟೇ ಅಲ್ಲ, ೫೭ ಸಲವೂ ಅಲ್ಜೀರಿಯಾದ ಸ್ವಾತಂತ್ರ್ಯವನ್ನೂ ಸಾರ್ವಭೌಮತ್ವವನ್ನೂ ಒಪ್ಪಿಕೊಂಡಿತ್ತು !

ಅಂದು ನೆರವಿತ್ತರಾಷ್ಟ್ರ ಇಂದು ಭಾಗವಂತೆ !

ಈ ಒಡಂಬಡಿಕೆಗಳ ಪ್ರಕಾರ ೧೬ನೆಯ ಶತಮಾನದಲ್ಲಿ ಫ್ರಾನ್ಸಿಸ್, ಪ್ರಾವೆನ್ಸ್ ಕರಾವಳೀ ತೀರದ ರಕ್ಷಣೆಗೆ ಅಲ್ಜೀರಿಯಾ ಸೈನಿಕರ ಸಹಾಯ ಪಡೆದಿದ್ದ IV ನೆಯ ಹೆನ್ರಿಯು (1753ರಲ್ಲಿ) ಸ್ಪೇನಿನವರ ಕೈಯಲ್ಲಿದ್ದ ಮಾರ್ಸೇಲ್ಸ್ ವಿಮೋಚನೆಗಾಗಿ ಅಲ್ಜೀರಿಯನ್ನರ ಸಹಾಯ ಪಡೆದಿದ್ದ. 1797ರಲ್ಲಿ ಫ್ರಾನ್ಸಿಗಾದ ಆಹಾರ ಮತ್ತು ಆರ್ಥಿಕ ಸಹಾಯದ ಬಹಿಷ್ಕಾರವನ್ನು ಮುರಿದು ಆಹಾರ ಮತ್ತು ಆರ್ಥಿಕ ನೆರವುಗಳನ್ನಿತ್ತ ಏಕೈಕ ರಾಷ್ಟ್ರವೆಂದರೆ ಅಲ್ಜೀರಿಯಾವಾಗಿತ್ತು ! ಆ ಸಹಾಯವನ್ನು ಫ್ರಾನ್ಸ್ ಆಗೆಂದೂ ಮರೆಯಲಿಲ್ಲ, ಅದರ ಬಗ್ಗೆ ಬಡಿದಾಡಲಿಲ್ಲ. ಆದರೆ ಇಂದು ಅಲ್ಜೀರಿಯಾ ಫ್ರಾನ್ಸಿನ ಒಂದು ಭಾಗವಂತೆ!

ಪ್ರಥಮ ಮಹಾ ರಕ್ತಪಾತ

ಕ್ರಿ.ಶ. 1830ರಲ್ಲಿ ಅಲ್ಜೀರಿಯಾದ ಮೇಲೆ ನಡೆದ ವಸಾಹತುಶಾಹಿ ಸಾಮ್ರಾಜ್ಯಶಾಹಿಯ ಚರಿತ್ರೆಯಲ್ಲೇ ಅತ್ಯಂತ ದೊಡ್ಡ ರಕ್ತಪಾತದ ಕತೆಯಾಗಿದೆ. ಫ್ರೆಂಚ್ ಸೈನಿಕರು ನಿಷ್ಕರುಣಿಗಳಾಗಿ ಗಂಡಸರು, ಹೆಂಗಸರು, ಮಕ್ಕಳು, ಮುದುಕರು ಎಂಬ ಯಾವ ಭೇದಭಾವವೂ ಇಲ್ಲದೆ ಅವರ ಆಸ್ತಿಪಾಸ್ತಿಗಳನ್ನು ಉಳಿಸದೆ ದೊಡ್ಡದೊಂದು ನರಹತ್ಯಾಮೇಧವನ್ನೇ ನಡೆಸಿದರು. ಸಾಮೂಹಿಕ ಕಗ್ಗೊಲೆ, ಕ್ರೂರವಾದ ನಡತೆಗಳು ಇವು ಫ್ರೆಂಚ್ ಸೈನಿಕರ ಘನಕಾರ್ಯಗಳಾಗಿದ್ದವು ! 1833ರಲ್ಲಿ ಫ್ರೆಂಚ್ ಸರ್ಕಾರವು ನೇಮಿಸಿದ ಆಫ್ರಿಕನ್ ಸಮಿತಿಯು ಹೀಗೆ ವರದಿ ಮಾಡಿತ್ತು: "ಅನಾಗರಿಕರನ್ನು ನಾಗರಿಕರನ್ನಾಗಿಸಲು ಬಂದಿದ್ದ ನಾವು ಅನಾಗರಿಕಂತಲೂ ಹೀನವಾಗಿ ಇಲ್ಲಿ ನಡೆದುಕೊಂಡಿದ್ದೇವೆ."

ಅಂದಿನಿಂದ ಫ್ರಾನ್ಸ್ ಅಲ್ಜೀರಿಯಾವನ್ನು ವಸಹಾತನ್ನಾಗಿಸಲು ತನ್ನ ಕಾನೂನುಗಳನ್ನೂ, ಆಡಳಿತ ಯಂತ್ರವನ್ನು ಅಲ್ಲಿ ಸ್ಥಾಪಿಸಿತು. ಆದರೆ ಅಲ್ಜೀರಿಯನ್ ಜನತೆ 'ಫ್ರೆಂಚ್‌ರಿಂಬುವುದು' ಏನಿದೆಯೋ ಅದನೆಲ್ಲ ತಿರಸ್ಕರಿಸಿದೆ. ೧೩೦ ವರುಷಗಳಿಂದಲೂ ಅಲ್ಜೀರಿಯನ್ ಜನತೆ ಫ್ರೆಂಚ್‌ರನ್ನೂ ತಿರಸ್ಕರಿಸುತ್ತ ಪ್ರತಿಭಟಿಸುತ್ತ ಬಂದಿದೆ. ಅಲ್ಜೀರಿಯನ್ನರು ತಮ್ಮ ಮಾತೃ ಭೂಮಿಗೆ ನಿಷ್ಠರಾಗಿ, ಫ್ರೆಂಚ್‌ರ ವಸಾಹತನ್ನೂ, ಫ್ರಾನ್ಸಿನ ಒಂದು ಭಾಗವನ್ನಾಗಿಸುವ ಪ್ರಯತ್ನವನ್ನು ಪ್ರತಿಭಟಿಸುತ್ತ ಬಂದಿದ್ದಾರೆ.

ಫ್ರೆಂಚ್ ನೆಲಸಿಗರ ನೆಲೆ

ಅಲ್ಜೀರಿಯನ್ ಜನತೆ ಸೋಲನ್ನೆಂದೂ ಒಪ್ಪಿಕೊಂಡಿಲ್ಲ. 1830-1847ರ ಕಾಲಾವಧಿಯಲ್ಲಿ ಸಾಮ್ರಾಜ್ಯಶಾಹಿಗಳು ನಡೆಸಿದ ಸಾಮೂಹಿಕ ಕೊಲೆಗಳಾಗಲಿ, 1864ರಿಂದ 1871ರಲ್ಲಿ ನಡೆದ ಅವರ ಸ್ವದೇಶ ಪ್ರೇಮವನ್ನು ಕೊಲ್ಲುವ ಕ್ರೂರ ಕೃತಿಗಳಾಗಲಿ ಅಲ್ಜೀರಿಯನ್ನರ ಸ್ವಾತಂತ್ರ್ಯ ದಾಹವನ್ನು ಅಡಗಿಸಲು ಸಮರ್ಥವಾಗಲಿಲ್ಲ.

ಅಲ್ಜೀರಿಯಾವನ್ನು ಹೇಗಾದರೂ ಮಾಡಿ ತನ್ನ ಗುಲಾಮರಾಷ್ಟ್ರವನ್ನಾಗಿಸಲು, ತನ್ನ ಮಡಿಲಲ್ಲಿ ಮಡಗಿಡುವುದು ಫ್ರಾನ್ಸಿಗೆ ಬೇಕಾಗಿದೆ. ಯಾಕೆಂದರೆ ಫ್ರೆಂಚ್ ಸಾಮ್ರಾಜ್ಯಶಾಹಿಗಳಿಗೆ ಅಲ್ಜೀರಿಯಾವನ್ನೂ ಅಲ್ಜೀರಿಯನ್ ಜನತೆಯನ್ನೂ ಶೋಷಿಸುವುದು ಬೇಕಾಗಿದೆ. ಫ್ರೆಂಚ್ ನೆಲಸಿಗರ ನೆಲೆಯಾಗಿ ಅಲ್ಜೀರಿಯಾವನ್ನು ಪರಿವರ್ತಿಸಬೇಕೆಂಬ ತಮ್ಮ ಆಶೆಯನ್ನೂ ಜನರಲ್ ಜೋಗೀಬಾ ಬಚ್ಚಿಟ್ಟಿಲ್ಲ. ಅಲ್ಜೀರಿಯಾದಲ್ಲಿ ನೆಲೆಸಬಯಸುವ ಫ್ರೆಂಚ್ ಸೈನಿಕರಿಗೆ ವಿಸ್ತಾರ ವಸತಿ ನೆಲೆಗಳನ್ನು ಕೊಡುವುದಾಗಿ ಆಶ್ವಾಸನೆ ಕೊಡಲಾಗಿದೆ. ಯೂರೋಪಿಯನ್ನರು ಅಲ್ಲಿಯ ಮೂಲ(ಸ್ಥಳೀಯ)ಜನರ ಸಂಖ್ಯೆಗೆ ಸರಿಯಾದ ಸಂಖ್ಯೆಯಾಗಿರುವಂತೆಯೂ, ಮರಳುಗಾಡಿನಲ್ಲಿ ವಸಹಾತು ಸ್ಥಾಪನೆಗೆ ಬಿಳಿಯರು ಮುನ್ನುಗ್ಗಲು ಅವಕಾಶ ಮಾಡಿಕೊಡುವುದೂ ಅವರಿಗೆ ಬೇಕಾಗಿದೆ.

ಕ್ರಮೇಣ ಫ್ರೆಂಚರು ತಮ್ಮ ದೇಶದ ಹಾಗೂ ಯುರೋಪದ ಬಡ ರೈತರಿಗೆವಾಸಿಸಲು ಅಲ್ಲಿ ಅವಕಾಶ ಮಾಡಿಕೊಟ್ಟರು. ಅವರಿಗಾಗಿ ಸುಂದರ ದೊಡ್ಡ ನಗರಗಳಂತಹ ಹಳ್ಳಿಗಳನ್ನು ಕಟ್ಟಲಾಯಿತು. ಯೂರೋಪಿಯನ್ ವ್ಯಾಪಾರಿಗಳು ವಾಣಿಜ್ಯ ವ್ಯವಹಾರಗಳ ಗುತ್ತಿಗೆದಾರರಾದರು. ಅಲ್ಜೀರಿಯಾದ ಅಗ್ಗದ ಮಾನವ ಶ್ರಮವನ್ನೂ, ನೈಸರ್ಗಿಕ ಸಂಪದಮೂಲಗಳನ್ನು ಬಳಸಿ ಫ್ರೆಂಚ್ ಸಾಮ್ರಾಜ್ಯಶಾಹಿಗಳು ತಮ್ಮ ಹಿತಕ್ಕಾಗಿ ಶೋಷಿಸಿದರು.

ಭೂಮಿಗಳ್ಳರು

ಯೂರೋಪಿಯನ್ ನೆಲಸಿಗರಿಗೆ ಭೂಮಿಯನ್ನು ಹೆಚ್ಚು ಹೆಚ್ಚಾಗಿ ದೊರಕಿಸಿಕೊಡಲು ಭೂವಿತರಣೆಯ ಕಾಲಕ್ಕೆ ವ್ಯವಸ್ಥಿತ ಕಳ್ಳತನವೇ ಅಲ್ಲಿ ನಡೆಯಿತು. ಈ ಭೂವಿತರಣೆಯ ಪರಿಣಾಮವೆಂದರೆ ಈ ನೂರು ವರುಷಗಳಲ್ಲಿ ಅಲ್ಜೀರಿಯನ್ ಜನತೆ-ತಮ್ಮ ದೇಶದ ;ಎರಡು ಮೂರಾಂಶದಷ್ಟು ತಮ್ಮ ಭೂಮಿಗೆ ಎರವಾಗಿದ್ದಾರೆ.

ನೂರನೂವತ್ತು ವರುಷಗಳ ಶೋಷಣೆಯ ಕತೆಯ ಅವಲೋಕನೆ

ಅದೆಲ್ಲ ಯೂರೋಪಿಯನ್ ನೆಲಸಿಗರ ಸ್ವಂತ ಭೂಮಿಯಾಗಿದೆ.

ಅಲ್ಜೀರಿಯಾದಲ್ಲಿರುವ ಎಲ್ಲಾ ವರ್ಗಗಳು ಒಡೆದು ಹೋಗಿ ಇಡೀ ಜನಸಮೂಹವೇ ಬಡಕಾರ್ಮಿಕರ ದೊಡ್ಡ ಪಡೆಯೇ ಆಗಿದೆ. 1830ರಲ್ಲೂ 1959ರಲ್ಲೂ ಅಲ್ಜೀರಿಯಾದ ದುಡಿಯುವ ಜನರ, ರೈತರ ಸ್ಥಿತಿಗತಿಯಲ್ಲಿ ಆಗಿರುವ ವ್ಯತ್ಯಾಸವೆಂದರೆ ಮೊದಲು ಅವರು ತಮ್ಮ ನೆಲಕ್ಕೆ ತಾವೇ ಒಡೆಯರಾಗಿದ್ದರು, ಈಗ ಅದೇ ನೆಲದ ಮೇಲೆ ಬಡಕೂಲಿಗಳಾಗಿದ್ದಾರೆ.

ಅವರ ಗೋಧಿ ಅವರಿಗಿಲ್ಲ

ಸಾಮ್ರಾಜ್ಯಶಾಹಿಯ ಈ ನೀತಿಯ ಫಲಿತಾಂಶವೆಂದರೆ ಸರಕಾರದ ಗಮನವೆಲ್ಲ ಹೊರಗಿನ ನೆಲಸಿಗರ ಹಿತಕ್ಕೇ, ಸುಖಕ್ಕೇ ಮೀಸಲಾಗಿ ಸ್ಥಳೀಯ ಬಡಜನತೆ ಅನ್ನಗೇಡಿಗಳಾದರು. ಗೋಧಿಯು ಅಲ್ಲಿಯ ಪ್ರಮುಖ ಆಹಾರ. ಅವರ ಆಹಾರವನ್ನು ಹೀಗೆ ಕಸಿದುಕೊಳ್ಳಲಾಯಿತು. ಅವರ ಆಹಾರ ಹೇಗೆ ಕಡಮೆಯಾಯಿತು ಎಂಬುದಕ್ಕೆ ಈ ಅಂಕಿಗಳೇ ಸಾಕ್ಷಿ.

1811ರಲ್ಲಿ ಒಬ್ಬನಿಗೆ 5 ಕಿಟಾರ್‌ಗಳು, 1911ರಲ್ಲಿ 4 ಕಿಟಾರ್‌ಗಳು, 1940ರಲ್ಲಿ 211 ಕಿಟಾರ್‌ಗಳು, 1945ರಲ್ಲಿ ಇವಕ್ಕೂ ಕಡಮೆ ಪ್ರಮಾಣದಲ್ಲಿ ಅವನಿಗೆ ದೊರೆಯುತೊಡಗಿತು.

ಉತ್ಕೃಷ್ಟವಾದ ಭೂಮಿಯಲ್ಲಿ ಅರ್ಧ ಮಿಲಿಯನ್ ಹೆಕ್ಟೆರ್‌ಗಳಷ್ಟು ಭೂಮಿ ಸೇಂದಿ ಕೃಷಿಗಾಗಿ ಕೊಡಲ್ಪಟ್ಟಿದೆ. ನಿಜವಾದ ಹಕ್ಕುದಾರರಿಂದ ಈ ಭೂಮಿಯನ್ನಷ್ಟೇ ಕಿತ್ತುಕೊಳ್ಳಲಾಗಿಲ್ಲ, ಅವರ ಪ್ರಮುಖ ಆಹಾರವಾದ ಗೋಧಿಯನ್ನು ಬೆಳೆಸದೆ, ಆವರೆಂದೂ ರುಚಿ ನೋಡದ, ನೋಡಲಿಕ್ಕಾಗದ ಉತ್ತಮ ವೈನ್ ಬೆಳೆಗಾಗಿ ಮೀಸಲಾಗಿಸಿದೆ !

ಅಲ್ಜೀರಿಯಾ ಬಾಂಧವರಿಗೆ—

ಉದಾರ ಸಹಾಯ ನೀಡಿ

“ನಮ್ಮ ಸ್ವಾತಂತ್ರ್ಯ ಸಂಗ್ರಾಮವನ್ನು ಸ್ಮರಿಸುತ್ತ ಸಂಕಷ್ಟದಲ್ಲಿರುವ ಈ ಜನರಿಗೆ ನಮ್ಮ ಗಾಢವಾದ ಸಹಾನುಭೂತಿಯನ್ನು ತೋರಿಸೋಣ. ಅಂತರ್‌ರಾಷ್ಟ್ರೀಯ ರಂಗದಲ್ಲಿ ನಮ್ಮ ಸರ್ಕಾರ ಅಲ್ಜೀರಿಯನ್ ಜನರ ಉದ್ದೇಶಕ್ಕೆ ಬೆಂಬಲ ನೀಡಿದೆ. ಅಲ್ಜೀರಿಯನ್ ಜನರ ಸಂಕಷ್ಟ ಪರಿಹಾರದಲ್ಲಿ ಎಷ್ಟು ಅಲ್ಪವಾದರೂ ಚಿಂತೆಯಿಲ್ಲ, ಸಕ್ರಿಯ ಸಹಾಯ ನೀಡುವುದು ಭಾರತೀಯರ ಕರ್ತವ್ಯವಾಗಿದೆ.

ಅಲ್ಜೀರಿಯನ್ ಜನತೆಗೆ ನಮ್ಮ ಸಹಾನುಭೂತಿಯ ಸಂಕೇತವಾಗಿ ಧನರೂಪದಲ್ಲಾಗಲೀ, ಇನ್ನಾವುದೇ ರೀತಿಯಲ್ಲಾಗಲಿ ಸಹಾಯ ನೀಡಬೇಕೆಂದು ಭಾರತೀಯ ಜನತೆಗೆ ನಾವು ಮನವಿ ಮಾಡಿಕೊಳ್ಳುತ್ತೇವೆ. ವೈದ್ಯಕೀಯ ಸಹಾಯವನ್ನಾಗಲಿ, ಬಟ್ಟೆಬರೆಗಳ ಸಹಾಯವಾಗಲಿ ವಿಶೇಷವಾಗಿ ಪ್ರಶಂಸನೀಯವಾಗಿದೆ. ಉದಾರವಾಗಿ ನೀಡಬೇಕಾದ ಈ ಸಹಾಯಕ್ಕೆ ವಿಳಂಬ ಕೂಡದು”

ಎಲ್ಲಾ ಕೊಡುಗೆಗಳನ್ನೂ-ಶ್ರೀಮತಿ ರಾಮೇಶ್ವರೀ ನೆಹರೂ, ಅಥವಾ ಶ್ರೀಮತಿ ಅರುಣ ಆಸಫ್ ಆಲಿ, ಇಲ್ಲವೆ ಶ್ರೀ ಜಗಲ್ ಕಿಶೋರ್ ಖನ್ನಾ Algeria Aid Committee 14-B, Queensway Barracks, New Delhi. ಈ ವಿಳಾಸಕ್ಕೆ ಕಳುಹಿಸಬೇಕು”.

ಮೇಲಿನದು ಅಲ್ಜೀರಿಯಾ ಸಹಾಯ ಸಮಿತಿಯವರು ಭಾರತೀಯ ಜನರಿಗೆ ಮಾಡಿಕೊಂಡಿರುವ ಮನವಿಯ ಒಂದು ಭಾಗವಾಗಿದೆ.

ಈ ಮನವಿಗೆ ರುಜು ಹಾಕಿದ ಪ್ರಮುಖರಲ್ಲಿ ಶ್ರೀಮತಿ ರಾಮೇಶ್ವರಿ ನೆಹ್ರೂ, ಶ್ರೀಮತಿ ಅರುಣಾ ಆಸಫ್ ಆಲಿ (ಮೇಯರ್, ದೆಹಲಿ), ಪಂಡಿತ ಸುಂದರ್‌ಲಾಲ್, ಮತ್ತು ಎಂ. ಪಿ ಗಳಾದ ಡಾ|| ಅರುಣ ಸಿಂಘ್, ಎಸ್. ಎ. ಡಾಂಗೆ, ಏ.ಕೆ. ಗೋಪಾಲನ್, ಸುಚೇತಾ ಕೃಪಲಾನಿ, ಗ್ಯಾನಿ ಗುರುಮುಖ ಸಿಂಗ್ ಮುಸಾಫಿರ್ (ಪಂಜಾಬ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ), ಮೌಲಾನಾ ಹಿಫ್‌ಝುರ್ ರೆಹ್ಮಾನ್, ಎನ್. ಆರ್. ಮಾಲ್ಕಾನಿ, ಎಂ. ಫರೂಕಿ, (ಭಾರತ ಕಮ್ಯೂನಿಸ್ಟ್ ಪಕ್ಷದ ದಿಲ್ಲಿ ಶಾಖೆಯ ಕಾರ್ಯದರ್ಶಿ) ಮತ್ತು ರಮೇಶ್ ಚಂದ್ರ (ಅಖಿಲ ಭಾರತ ಶಾಂತಿ ಸಮಿತಿಯ ಪ್ರಧಾನ ಕಾರ್ಯದರ್ಶಿ) ಮುಂತಾದವರು ಇರುವರು.

ಸಾಯ

ಇದರ ಪ
ನ್ನರು ಭೂಮ
ಕಳೆದುಕೊಂ
ಡರು.
ಯೂರೋ
'ತಮ್ಮ' ಭ
ಕ್ಕೆ ತೊಡಗಿ
ನೆಯೂ ಹೆ
ದೇ ಕಾಲಕ್ಕೆ
ಫ್ರೆಂಚ್ ಟ
ಯಂತ್ರೋಕ
ಚ್ಚಿತು.
ಮಾರ್ಗಗಳ
ಓಡ್ಯೋಗಿ
ಗೆ ಕೆಲಸದ
ಇದರಿಂ
ತಮ್ಮ ದೇ
ದರೆ ತಮ್ಮ
ಲೆ ಹಸಿವಿನ

ಅಂತ್ಯವಿ

ಈ ದುರ
ಈ ಕತೆ
ದ್ಯೋಗಿ ಕ
ದರೆ ಇಷ್ಟಾ
ಅಂತೆಯೇ
ಮಕ್ಕಳನ್ನು
ದೆನ್ನುವದ
ಹೊರಡಬೇ
ಉದ್ಭೂತವ
ಹೊರಟ ಜ
ಸಂಬಳ ಹ
ಲಸಗಳನ್ನು
ವರಿಗೆ ತ
ಕೂಡ ಅವ
ಇಷ್ಟರ
ಫ್ರೆಂಚರು
ವನ್ನು ತ
ಧರ್ಮ ಸಂ
ಕೊಳ್ಳುತ್ತಿದ
ವಿದೇಶಿ ಭಾ
ಗಿದೆ !
ಹೀಗೆ
ಪ್ರದೇಶದ
ಯಲ್ಲೂ ಅ
ವಾಗಿ, ಸ
ಇದು ಅಲ್ಲಿ

ಎಷ್ಟು

ಹೀಗೆ
ಷ್ಟ ದಿನ
ಯಾದಲ್ಲಿರ
ವನ್ನು ಶಾ
ಕೊನೆಗಾಣ
ದ ಜನರ
ರ್ಲಕ್ಷಿಸಿತು
ದ್ಧ ಮುಗಿ
ರ್ದನಗಳು
ಸಂಯುಕ್ತ
ದಲ್ಲಿರುವ
ಸೋದರತ

ತ ಹಕ್ಕು !
ಪರಿ ಅಲ್ಜೀರಿಯ
ೂಂದರು, ಕೆಲಸ
ವರ ಕಳೆದುಕೊಂ

ಸಿ ವಾ ಸಿ ಗ ಳು
ಯಾಂತ್ರೀಕರಣ
ದಿಂದ ಉತ್ಪನ್ನ
ಹೆಚ್ಚಿತು. ಇ
ಂತ್ರೀಕರಣದಿಂದ
ಾ ವ್ಯವಸಾಯದ
ಾ ಬೇಡಿಕೆ ಹೆ
ಯಾಂತ್ರಿಕ ಸಾ
ಬಂದುದರಿಂದ
ಅಲ್ಜೀರಿಯನ್ನರಿ
ಮೆಯಾಯಿತು.
ರುನ್ ಜನರಿಗೆ
ರುವ ಹಕ್ಕು ಎಂ
ನ್ನು ನೆಲದ ಮೇ
ರುದು ಮಾತ್ರ.

ರಂತ ಕಳೆ
ವೇ ಅಂತ್ಯವಲ್ಲ.
ಿದೆ. ಈ ನಿರು
ಹಾಪರಾಧವೆಂ
ುತ್ತಿರುವುದು !
ಹೆಂಡಂದಿರನ್ನು
ಗಳನ್ನು ತಮ್ಮದೆ
ಟ್ಟ ದೇಶಾಂತರ
ಂತದ ಪರಿಸ್ಥಿತಿ
ನ್ನಿಸಿಗೆ 'ಯಾತ್ರೆ'

ದಾಗಿ

ುತ ಕೆಳವುಟ್ಟದ
ಕ್ಷುದ್ರವಾದ ಕೆ
1955ರಿಂದ ಆ
ಡಿಗೆ ಮರಳಲು

ಟ್ಟುಪಟ್ಟುಕೊಳ್ಳದ
ನನ್ನೂ, ಧರ್ಮ
ು. ಮುಸ್ಲಿಂ
ಂಚರು ನೋಡಿ
ಕ್ ಭಾಷೆಗೆ ಅಲ್ಲಿ
ವನ್ನು ನೀಡಲಾ

ಾಯ ಸೀಳಿ ಆ
ಎಲ್ಲಾ ರೀತಿ
ವಾಗಿ, ನೈತಿಕ
ನಡೆಸುತ್ತಿದೆ.
ದಿನ ಸ್ಥಿತಿ.

ನಿದ್ದಾರು?
ಾದ ಜನ ಎ
ರು? ಅಲ್ಜೀರಿ
ಾರ್ಹ ಆಡಳಿತ
ವಿಧಾನಗಳಿಂದ
ಅಲ್ಜೀರಿಯಾ
ಫ್ರಾನ್ಸ್ ಸಿ
ಆಗಾಗಿಕ ಯು
ಬಗೆಯ ನು
ಗಳೂ ಕೊಲೆಗ
ತಾನ್ತ್ರ ಪಟ
ರಂತೆ ಮತ್ತು
ಯ್ಯಗಳು ತನ್ನ

ಪುನರೂಪಿತ ಯೋಜನೆ

ಸರಕಾರ ಯೋಜನಾಬದ್ಧ ಬೆಳವಣಿಗೆಗೆ ಸಿದ್ಧವಿಲ್ಲ

ನಿರೀಕ್ಷಿತ ಆದಾಯ ಕೇವಲ ಕನಸಿನ ಲೆಕ್ಕಾಚಾರ!

ಕಳೆದ ತಿಂಗಳಲ್ಲಿ ಸಮಾವೇಶಗೊಂಡಿದ್ದ ರಾಷ್ಟ್ರೀಯ ಅಭಿವೃದ್ಧಿ ಯೋಜನಾ ಮಂಡಲಿಯು ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಮೊದಲ ಎರಡು ವರ್ಷಗಳ ಫಲಿತಾಂಶವನ್ನು ಸಮಿಾಕ್ಷೆ ಮಾಡಿದ ನಂತರ ಮುಂದಿನ ಎರಡು ವರ್ಷಗಳ ಬಗ್ಗೆ ಭವಿತವ್ಯವನ್ನು ಕುರಿತು ಪರಿಶೀಲಿಸಿತು.

ಪರಿಶೀಲನೆಯ ಆಧಾರದ ಮೇಲೆ ಮೊದಲು ಯೋಜಿಸಲಾಗಿದ್ದ 4,800 ಕೋಟಿ ರೂ.ಗಳ ಅಂದಾಜನ್ನು 4,500 ಕೋಟಿ ರೂ.ಗಳಿಗೆ ಇಳಿಸಲಾಯಿತು.

ಮೊದಲಿನ 4,800 ಕೋಟಿ ರೂ.ಗಳ ಅಂದಾಜನ್ನು ಯಥಾಸ್ಥಿತಿಯಲ್ಲಿ ಕೊಂಡು ಯೋಜನೆಯ ಕಾರ್ಯಕ್ರಮವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಭಾಗದಲ್ಲಿ 4,500 ಕೋಟಿ ವೆಚ್ಚದಲ್ಲಿ ಯೋಜನೆಯ ತಿರುಳನ್ನು ಜಾರಿಗೆ ತರಲಾಗುವುದು. ಎರಡನೆಯ ಭಾಗದಲ್ಲಿ ಉಳಿದ 300 ಕೋಟಿ ರೂ. ಅಂದಾಜನ್ನು ಆದಾಯವನ್ನನುಸರಿಸಿ ಜಾರಿಗೆ ತರಲಾಗುವುದು.

ಮೇಲಿನ ಹೊಸ ದೃಷ್ಟಿಯಿಂದ ಯೋಜನಾ ಆಯೋಗವು ಎರಡು ಭಾಗಗಳಿಗೂ ಅನ್ವಯವಾಗುವಂತೆ ತಯಾರಿಸುವ ಅಂದಾಜು ಈ ಕೆಳಕಂಡಂತಿದೆ.

ಮುಖ್ಯಾಂಶಗಳ ಉಪೇಕ್ಷೆ

ಯೋಜನೆಯನ್ನು ತಯಾರಿಸುವಾಗ ಹಣಕಾಸಿನ ಗುರಿ ಗೊತ್ತುಮಾಡುವುದಷ್ಟೇ ಅಲ್ಲದೆ, ಬೇಡಿಕೆ ಮತ್ತು ನೀಡಿಕೆ, ಉಳಿತಾಯ ಮತ್ತು ಬಂಡವಾಳ, ಆದಾಯ ಮತ್ತು ವಿದೇಶೀ ವಿನಿಮಯ ಇತ್ಯಾದಿಗಳ ನಡುವೆ ಸರಿದೂಗಿಸುವುದೂ ಅಗತ್ಯ. ಈ ರೀತಿ ಸರಿದೂಗಿಸುವುದು ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವುದರಲ್ಲಿ ಅತಿ ಮುಖ್ಯವಾದುದು.

ದ್ವಿತೀಯ ಪಂಚವಾರ್ಷಿಕ ಯೋಜನೆಯ ತಯಾರಿಕೆಯಲ್ಲಿ ಈ ಮುಖ್ಯಾಂಶವನ್ನು ಸಂಪೂರ್ಣವಾಗಿ ಉಪೇಕ್ಷೆ ಮಾಡಲಾಗಿದೆ ಎಂದು ಹೇಳಬಹುದು. ಇದು ಹೇಗೆ ಎಂಬುದನ್ನು ಪರಿಶೀಲಿಸೋಣ.

ವಿಶೇಷ ಲೇಖನ

ಕಳೆದ ವರ್ಷ ಟಿ. ಟಿ. ಕೆ.ಯವರು ಪಾರ್ಲಿಮೆಂಟಿನಲ್ಲಿ ಯೋಜನೆಯನ್ನ ಪೂರ್ತಿಯಾಗಿ ಕಾರ್ಯಗತಗೊಳಿಸಲು ಮೊದಲು ಗೊತ್ತು ಮಾಡಿದ್ದಕ್ಕಿಂತಲೂ (4,800 ಕೋಟಿಗಿಂತಲೂ) 800 ಕೋಟಿ ರೂ.ಗಳು ಹೆಚ್ಚು ಖರ್ಚು ಮಾಡಬೇಕಾಗುವುದೆಂದು ತಿಳಿಸಿದರು. ಬೇರೇ ರೀತಿಯಲ್ಲಿ ಹೇಳಬೇಕಿದ್ದಲ್ಲಿ ಈಗಿನ 4800 ಕೋಟಿ ರೂ.ಗಳಲ್ಲಿ ಕೇವಲ ಶೇ. 83ರಷ್ಟು ಮಾತ್ರ ಗುರಿಯನ್ನು ಸಾಧಿಸಬಹುದು ಅಷ್ಟೆ.

ಇಂದು ಇದಲ್ಲದೆ ಮತ್ತೊಂದು ಕಡಿತವನ್ನು ಮಾಡಲಾಗಿದೆ. ಇದರಿಂದ ಯೋಜನೆಯ ಗುರಿಯು ಮತ್ತಷ್ಟು ಕಡಿಮೆಯಾಗುವುದು ಎಂದು ಹೇಳುವುದನಗತ್ಯ. ಅಂದರೆ ಬೆಲೆಗಳು ಇಂದಿನ ಮಟ್ಟದಲ್ಲೇ ಇದ್ದಲ್ಲಿ ಮೊದಲಿನ ಗುರಿಯಲ್ಲಿ ಶೇ. 80 ರಷ್ಟನ್ನು ಸಾಧಿಸಲಾಗುವುದಿಲ್ಲ.

ಬೆಲೆ ನಿಗದಿ ಮಾಡಲಿಲ್ಲ

ಯೋಜನೆಯು ಇಂದು ಬಿಕ್ಕಟ್ಟಿನಲ್ಲಿ ಸಿಕ್ಕಿರುವುದಕ್ಕೆ ಸರಕಾರವು ಬೆಲೆಗಳನ್ನು ನಿಗದಿ ಮಾಡದಿರುವುದೂ ಒಂದು ಕಾರಣವಾಗಿದೆ ಕಂಟ್ರೋಲ್ ಇದ್ದಂಥ ಕಲ್ಲಿದ್ದಲು, ಕಬ್ಬಿಣ, ಉಕ್ಕು, ಸಿಮೆಂಟ್ ಇತ್ಯಾದಿ ಸರಕುಗಳ ಮೇಲೂ ಬೆಲೆ ಅಧಿಕವಾಗಲು ಸರಕಾರ ಅವಕಾಶವಿತ್ತಿದೆ. ಮೇಲೆ ನಮೂದಿಸಿರುವ ಪದಾರ್ಥಗಳು ಯೋಜನೆಗೆ ಬೇಕಾಗಿರುವ ಮುಖ್ಯ ವಸ್ತುಗಳಾಗಿವೆ

ಯೋಜನೆ ತಯಾರಿಸಿದಾಗ 1952—53ರಲ್ಲಿ ಬೆಳಗೆ ಹೋಲಿಸಿದಲ್ಲಿ ಈ ಪದಾರ್ಥಗಳ ಬೆಲೆಯು ಕೆಳಕಂಡಂತೆ ಅಧಿಕಗೊಂಡಿವೆ.

ಕಲ್ಲಿದ್ದಲು ಶೇ. 30, ಎಣ್ಣೆಗಳು ಶೇ. 8, ಕಬ್ಬಿಣದ ಅದುರು ಶೇ. 64, ತಯಾರಾದ ಕಬ್ಬಿಣ ಮತ್ತು ಉಕ್ಕು ಶೇ. 45, ಲೋಹ ವಸ್ತುಗಳು ಶೇ. 43, ಸಿಮೆಂಟು ಶೇ. 40.

ಲ್ಲಿದ್ದಲು, ಸಿಮೆಂಟು, ಕಬ್ಬಿಣ, ಇತ್ಯಾದಿಗಳ ಬೆಲೆಯನ್ನು ಸರಕಾರ ನಿರ್ಧಸಿದರೆ, ಪೆಟ್ರೋಲಿಯಂ ಇತ್ಯಾದಿಗಳ ಬೆಲೆಯನ್ನು ಸರಕಾರ ನಿರ್ಧರಿಸಿದರೆ, ಪೆಟ್ರೋಲಿಯಂ ಇತ್ಯಾದಿಗಳ ಬೆಲೆಯನ್ನು ವಿದೇಶೀ ಕಂಪೆನಿಗಳು ನಿರ್ಧರಿಸುತ್ತವೆ. ಈ ಅತಿಮುಖ್ಯ ವಸ್ತುಗಳ ಬೆಲೆ ಹತೋಟಿಯಲ್ಲಿರಿಸಿಕೊಳ್ಳದಿದ್ದುದು ಸರಕಾರದ ಮೂರ್ಖತನವೇ ಸರಿ.

ಅಭಿವೃದ್ಧಿ ಯೋಜನೆ ಮುಖ್ಯ ಕ್ಷೇತ್ರಗಳಲ್ಲಿ ವಿನಿಯೋಗ

	ಕ್ಷೇತ್ರ	ಆರಂಭದ ವಿನಿಯೋಗ (ಕೋಟಿ ರೂ.ಗಳಲ್ಲಿ)	ಪುನರೂಪಿಸಿದ ಮೇಲೆ 4800 ಕೋಟಿಅಂದಾಜಿಗೆ ವಿನಿಯೋಗ	4500 ಕೋಟಿ ರೂ. ಅಂದಾಜಿಗೆ ವಿನಿಯೋಗ
1	ವ್ಯವಸಾಯ ಮತ್ತು ಸಾಮುದಾಯಿಕ ಯೋಜನೆ	568	568	510
2.	ನೀರಾವರಿ ಮತ್ತು ವಿದ್ಯುಚ್ಛಕ್ತಿ	913	860	820
3.	ಗ್ರಾಮಾಂತರ ಮತ್ತು ಸಣ್ಣ ಕೈಗಾರಿಕೆಗಳು	200	200	160
4.	ಕೈಗಾರಿಕೆ ಮತ್ತು ಗಣಿಗಳು	690	880	790
5.	ಸಾರಿಗೆ ಮತ್ತು ಸಂಪರ್ಕ	1385	1345	1340
6.	ಸಾಮಾಜಿಕ ಸೇವಾಕಾರ್ಯ	945	863	810
7.	ಇತರೇ	99	84	70
	ಒಟ್ಟು	4800	4800	4500

ಮೇಲಿನ ಪಟ್ಟಿಯನ್ನು ಗಮನಿಸಿದಲ್ಲಿ ಕೈಗಾರಿಕೆ ಮತ್ತು ಗಣಿಗಳನ್ನು ಬಿಟ್ಟು ಉಳಿದೆಲ್ಲವನ್ನೂ ಕಡಿಮೆ ಮಾಡಿರುವುದು ಕಾಣಬರುತ್ತದೆ. ಕೈಗಾರಿಕೆ ಮತ್ತು ಗಣಿಗಳಿಗೆ ಬಂಡವಾಳ ಅಧಿಕಗೊಳಿಸಿರುವುದರಿಂದ ಮೊದಲಿನ ಗುರಿಗಿಂತ ಹೆಚ್ಚು ಸಾಧನೆಯಾಗುತ್ತದೆ ಎಂದು ಅಪೇಕ್ಷಿಸುವುದು ತಪ್ಪಾಗುತ್ತದೆ.

ಯೋಜನೆಯ ಮೊದಲ ಮೂರು ವರ್ಷಗಳಲ್ಲಿ 2,456 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆಯೆಂದೂ ಮುಂದಿನ ಎರಡು ವರ್ಷಗಳಲ್ಲಿ ಇನ್ನೂ 1,804 ಕೋಟಿ ರೂ.ಗಳನ್ನು ವೆಚ್ಚಕ್ಕೆ ಸೇರಿಸಲು ಆಗುವುದೆಂದೂ, ಹೀಗೆ ಒಟ್ಟು 4,260 ಕೋಟಿ ರೂ.ಗಳನ್ನು ಐದು ವರ್ಷಗಳಲ್ಲಿ ಆಗುವುದೆಂದೂ ಹೇಳಲಾಗಿದೆ. ಬಾಕಿ ಉಳಿದ 240 ಕೋಟಿ ರೂ ಗಳಲ್ಲಿ, 100 ಕೋಟಿಯನ್ನು ಅಧಿಕ ತೆರಿಗೆಯಿಂದಲೂ, ಸಾಲ ಮತ್ತು ಅಲ್ಪ ಉಳಿತಾಯದಿಂದ 60 ಕೋಟಿ ರೂ ಮಿತ ವ್ಯಯ, ತೆರಿಗೆಯ ಹಿಂದಿನ ಬಾಕಿ ವಸೂಲಿ ಇತ್ಯಾದಿಗಳಿಂದ 80 ಕೋಟಿ ರೂ. ಎತ್ತಬಹುದೆಂದೂ ಹೇಳಲಾಗಿದೆ. ಆದರೆ ಈ ಅಂದಾಜು ಅನುಮಾನಾಸ್ಪದವಾದುದಾಗಿದೆ.

ಕನಸಿನ ಲೆಖ್ಖಾಚಾರ

ಮೇಲಿನ ಲೆಖ್ಖಾಚಾರವನ್ನು ಕೇವಲ ಅಂದಾಜಿನ ಮೇಲೆ ಮಾಡಲಾಗಿದೆ. ಏಕೆಂದರೆ ಮೊದಲನೆಯದಾಗಿ ಯೋಜನೆಯನ್ನು ಬಿಟ್ಟು ಬೇರೆ ಖರ್ಚು ಯಾವರೀತಿಯಲ್ಲಿಯೂ ಹೆಚ್ಚುವುದಿಲ್ಲವೆಂಬುದೂ ಮತ್ತು ತೆರಿಗೆಯ ಆದಾಯ ಸಾಮಾನ್ಯವಾಗಿ ಹೆಚ್ಚುವುದು ಎಂಬುದೇ ಊಹೆಯಾಗಿದೆ.

ಬೆಲೆಗಳನ್ನು ಕಡಿಮೆಮಾಡಲು ಸರಕಾರವು ಕ್ರಮ ತೆಗೆದುಕೊಳ್ಳದಿದ್ದಲ್ಲಿ ಸರಕಾರದ ಮೊದಲ ಊಹೆಯು ತಲೆಕೆಳಗಾಗುತ್ತದೆ. ಎಲ್ಲ ವಿಭಾಗದ ನೌಕರರೂ ಅಧಿಕ ವೇತನವನ್ನು ಬೇಡುತ್ತಿದ್ದಾರೆ, ದ್ವಿತೀಯ ಪೇಕಮಿಶನ್ ತನ್ನ ಕಾರ್ಯವನ್ನು ಪೂರೈಸಲಿದೆ, ಹೀಗಿರುವಾಗ ವೆಚ್ಚ ಅಧಿಕಗೊಳ್ಳದೆಂದು ಊಹಿಸುವುದಾದರೂ ಹೇಗೆ?

ಪ್ರಸಕ್ತ ಆರ್ಥಿಕ ದಿಶೆಯನ್ನು ನೋಡಿದಲ್ಲಿ ತೆರಿಗೆಯ ಆದಾಯವು ಸಾಮಾನ್ಯವಾಗಿ ಅಧಿಕಗೊಳ್ಳುವುದೆಂದು ಊಹಿಸುವ ಎರಡನೆಯ ಅಂಶವೂ ತಪ್ಪಾಗಿದೆ. ಏಕೆಂದರೆ ವಿದೇಶೀ ಮಾರುಕಟ್ಟೆಗಳಲ್ಲಿ ಮುಗ್ಗಟ್ಟು ಉಂಟಾಗುತ್ತಿರುವುದರಿಂದ ಈಗಾಗಲೇ ನಾವು ಟೀ, ಸೆಣಬು, ಬಟ್ಟೆ, ಸಕ್ಕರೆ ಇತ್ಯಾದಿಗಳ ಮೇಲೆ ಈಗಾಗಲೇ ರಫ್ತು ಸುಂಕವನ್ನು ಕಡಿಮೆ ಮಾಡಿರುವುದರಿಂದ ಬೇಕಾದಷ್ಟು ಆದಾಯ ಕಮ್ಮಿಯಾಗಿದೆ. ಈಗ ತಲೆದೋರಿರುವ ಮುಗ್ಗಟ್ಟು, ಶೀಘ್ರವಾಗಿ ಪರಿಹಾರವಾಗುವ ಸೂಚನೆ ಕಾಣಬರುವುದಿಲ್ಲ. ಆದ್ದರಿಂದಾಗಿ ತೆರಿಗೆ ಆದಾಯವು ಏಕ ರೀತಿಯಾಗಿರುವುದೆಂದು ಭಾವಿಸುವುದು ಸರಿಯಲ್ಲ.

ಸಾರ್ವಜನಿಕ ಸಾಲ ಮತ್ತು ಉಳಿತಾಯದ ಮೂಲಕ ಯೋಜನೆಯ ಕಾಲಾವಧಿಯಲ್ಲಿ 1200ಕೋಟಿ ರೂಗಳ ವರಮಾನ ಪಡೆಯಲು (ಸಾರ್ವಜನಿಕ ಸಾಲ 700 ಕೋಟಿ ರೂ, ಉಳಿತಾಯ 500 ಕೋಟಿ ರೂ.) ನಿರೀಕ್ಷಿಸಿದ್ದುದು ವಾಸ್ತವವಾಗಿ ಕಾರ್ಯರೂಪದಲ್ಲಿ ಕಡಿಮೆಯಾಗಿದೆ.

ವಿದೇಶೀ ನೆರವು

ಇಡೀ ಯೋಜನೆಯ ಕಾಲಾವಧಿಯಲ್ಲಿ ನಿರೀಕ್ಷಿಸಲಾಗಿದ್ದ ಒಟ್ಟು ವಿದೇಶೀ ನೆರ

(೬ನೇ ಪುಟ ನೋಡಿ)

ಹೀಗೆ ಕಾಣುತ್ತಿದೆ ಎಂದು ಭಾವಿಸಿದ್ದರು. —

ನ್ನಾಳುತ್ತವೆಯೆಂದು ಭಾವಿಸಿದ್ದರು. ಆದರೆ ಯಾವುದೂ ಆಗಲಿಲ್ಲ.

ಅಂತೆಯೇ 1945ರ ಮೇ ಆರಂದು ಪ್ರಪಂಚದ ರಾಷ್ಟ್ರಗಳೆಲ್ಲ ಸ್ವಾತಂತ್ರ್ಯ ಶಕ್ತಿಯ ವಿಜಯದ ಸಂಭ್ರಮದಲ್ಲಿರುವಾಗ ಅಲ್ಜೀರಿಯನ್ ಜನತೆ ನಾಝಿಗಳೆದುರು ಸೋತು ದಾಸ್ಯದಿಂದ ತಲೆಬಾಗಬೇಕಾಯಿತು. ಅವರ ಸ್ವಾತಂತ್ರ್ಯ ಹರಣವಾಗೇ ಇತ್ತು.

ನಿಸ್ಸಹಾಯರೂ, ರಕ್ಷಣಾ ಹೀನರೂ ಆಗಿದ್ದ 45,090 ಜನ ಅಲ್ಜೀರಿಯನ್ನರನ್ನು ಫ್ರೆಂಚರು ನಿರ್ದಯತನದಿಂದ ಗುಂಡಿಕ್ಕಿ ಕೊಂದರು. ಅತ್ಯಂತ ಅನಾಗರಿಕ ರೀತಿಯಲ್ಲಿ ಅಮಾನುಷ ಸಾಮೂಹಿಕ ಕೊಲೆ ನಡೆಯಿತು. ಇದು ಅವರ ಮೇ ಆನೆಯ ದಿನ.

ನ್ಯಾಯಬದ್ಧವಾಗಿಯೇ ಅವರು ತಮ್ಮ ಸ್ವಾತಂತ್ರ್ಯಕ್ಕೆ ಹೋರಾಟ ಆರಂಭಿಸಿದರೂ ಅವರಿಗೆ ದೊರೆತ ಉತ್ತರ—ಜೈಲು, ಚಿತ್ರಹಿಂಸೆ, ಕೊಲೆ, ಗಡೀಪಾರು ಮುಂತಾದವುಗಳಾಗಿದ್ದವು.

ಎಲ್ಲಾ ದಾರಿಗಳೂ ಮುಚ್ಚಿದಾಗ ಅವರು ಆಳುವ ಸುಲಿಗೆಗಾರರ ವಿರುದ್ಧ ಬಂಡಾಯದ ಕಹಳೆ ಊದಿದರು.

ಹೀಗೆ ಅವರು, 1793ರಲ್ಲಿ ಫ್ರೆಂಚ್ ವೀರ ಜನತೆ ತಮ್ಮ ನಾಡಿನಲ್ಲಾದ ಅನ್ಯಾಯ, ಮರ್ದನ, ನಿರಂಕುಶತೆಗಳ ವಿರುದ್ಧ ಬಂಡೆದ್ದಿದ್ದಂತೆ, ಆ ವೀರ ಜನತೆಯ ಸ್ಫೂರ್ತಿಯಿಂದ ಅಲ್ಜೀರಿಯನ್ನರೂ ಇಲ್ಲಿ ಮಹಾ ಸಂಗ್ರಾಮವನ್ನೇ ಹೂಡಿದರು. ಈ ಪ್ರತ್ಯಕ್ಷ ಬಂಡಾಯ 1954ರ ನವೆಂಬರ್ 1ರಂದು ಆರಂಭವಾಯಿತು. ಅಂದು ಬೆಳಗಿನಲ್ಲಿ ಮೊಳಗಿದ ಅವರ ಬಂದೂಕುಗಳ ಘರ್ಜನೆ, ಬಾಂಬುಗಳ ಅಸ್ಫೋಟನೆ ಹೋರಾಟ ಹಾಗೂ ಆತ್ಮಬಲಿದಾನದ ಗಳಿಗೆ ಬಂದಿದೆ ಎಂದು ಕರೆಯಿತ್ತವು.

ಅಂದಿನಿಂದ ಅಲ್ಜೀರಿಯಾದಲ್ಲಿ ಮಹಾ ಸಮರ ನಡೆದಿದೆ.

ವಿಯೆತ್ ನಾಮಿನ ದಂತ ಕತೆ

ಈ ದಂತ ಕತೆಯ ಪ್ರಕಾರ ವಿಯೆತ್ ನಾಮಿನಲ್ಲಿ ಪ್ರತಿವರುಷ ಹನ್ನೆರಡನೆ ಚಾಂದ್ರಮಾಸದ 23 ರಂದು ಓಂಗ್‌ಟಾವೊ ಅಂದರೆ ವಿಯೆತ್‌ನಾಮಿನ ಪ್ರತಿಯೊಂದು ಕುಟುಂಬದ ಅಡಿಗೆಯ ಅಧಿದೇವತೆಗಳು ಸ್ವರ್ಗಕ್ಕೆ ತೆರಳಿ ಅಲ್ಲಿ ಸಾಮ್ರಾಟ ಜೇಡ್‌ರಿಗೆ ಕುಟುಂಬದ ವಿಚಾರಗಳನ್ನು ತಿಳುಹಿಸುತ್ತಾರೆ. ಆಮೇಲೆ ಮತ್ತೆ ಕುಟುಂಬಗಳ ಸ್ಥಿತಿಗತಿಗಳನ್ನು ಪರಿಶೀಲಿಸಲು ಸೌರ್ಯವರುಷದ ಯುಗಾದಿಯಂದು ಮರಳುತ್ತಾರೆ.

ಈ ದಿನದಂದು ಅಡಿಗೆಯ ಅಧಿದೇವತೆಗಳನ್ನು ಸ್ವರ್ಗಕ್ಕೆ ಬೀಳ್ಕೊಳ್ಳಲು ಅವರ ಗೌರವಾರ್ಥವಾಗಿ ವಿಯೆತ್‌ನಾಮಿನ ಪ್ರತಿಯೊಂದು ಕುಟುಂಬವೂ ಹಬ್ಬವನ್ನಾಚರಿಸುತ್ತದೆ. ಮಂಗಲದೀಪಗಳು ಬೆಳಗುತ್ತಿರುತ್ತವೆ. "ಓಂಗ್‌ಟಾವೊ"ವನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುವ ವಾಹನವಾಗಿ ಜೀವಂತ ಕಾರ್ಪ್ ಮೀನೊಂದು ದೊಡ್ಡದೊಂದು ಪಾತ್ರೆಯಲ್ಲಿ ಈಜಾಡುತ್ತಿರುತ್ತದೆ.

ಬೇಕು

"ಜನಶಕ್ತಿ"ಯ ನೀತಿ-ಧ್ಯೇಯಗಳಿಗೊಪ್ಪುವ ಕಲಾತ್ಮಕವಾದ ಸಣ್ಣ ಕತೆಗಳಿಗೆ 'ಜನಶಕ್ತಿ' ಸ್ವಾಗತ ನೀಡುತ್ತದೆ. ಈ ಪತ್ರಿಕೆಯಲ್ಲಿ ಪ್ರಕಟವಾಗುವ ಕತೆಗಳು ಒಂದು ಪುಟಕ್ಕೆ ಜಾಸ್ತಿಯಾಗಿರಬಾರದು. ಅಚ್ಚುಕಟ್ಟಾಗಿ ಒಂದೇ ಮಗ್ಗುಲಿಗೆ ಬರೆದಿರಬೇಕು. ಅನುವಾದಿತ ಕತೆಗಳಾಗಿದ್ದರೆ ಮೂಲವನ್ನು ಸ್ಪಷ್ಟವಾಗಿ ತಿಳುಹಿಸಿರಬೇಕು.

ಅನ್ನ ಜನತೆಯ ಆಹಾರವಾದದ್ದು

— ಅಥವಾ —

ಅಡಿಗೆಯ ಅಧಿದೇವತೆಗಳು

"ಓಂಗ್‌ಟಾವೊ" ಬಗ್ಗೆ ಬೇಕಾದಷ್ಟು ದಂತಕತೆಗಳು ವಿವಿಧ ರೂಪದಲ್ಲಿವೆ ಆದರೆ ಅತ್ಯಂತ ಸಾಮಾನ್ಯವಾಗಿರುವ, ಎಲ್ಲರಿಗೂ ತಿಳಿದಿರುವ ಕತೆ ಹೀಗಿದೆ.

ಪ್ರಾಚೀನ ಕಾಲದಲ್ಲಿ ಜನಗಳಿಗೆ ಅನ್ನವನ್ನು ಬೇಯಿಸುವುದು (ಮಾಡುವುದು) ಹೇಗೆ ಎಂಬುದು ತಿಳಿದಿರಲಿಲ್ಲ. ಬೇಯಿಸಿದ ಅನ್ನ ಜೀರ್ಣಿಸಲು ಕಠಿಣವೂ ಆಗಿತ್ತು, ಅನೇಕ ಉದರ ಬೇನೆಗಳಿಗೂ ಕಾರಣವಾಗಿತ್ತು.

ಈ ಪರಿಸ್ಥಿತಿಯನ್ನು ಕೊನೆಗಾಣಿಸಲು ಕೃಷಿಯ ಅಧಿದೇವತೆಯಾದ ಸಾಮ್ರಾಟ ಥಾನ್ ನೋಂಗ್‌ನು ಪ್ರಕಟಣೆಯೊಂದನ್ನು ಹೊರಡಿಸಿ ಅನ್ನ ಬೇಯಿಸುವ ವಿಧಾನವನ್ನು ಯಾರಾದರೂ ಕಂಡುಹಿಡಿದರೆ ಅವರಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡುವದಾಗಿ ಸಾರಿದ.

ಹೀಗಿರುತ್ತ ಒಂದು ದಿನ ಲ್ಯಾ ಎಂಬ ಹೆಸರಿನ ರೈತನು ರಾಜಧಾನಿಗೆ ಬಂದು ಸಾಮ್ರಾಟನ ಸಂದರ್ಶನಕ್ಕೆ ಅಪ್ಪಣೆ ಕೇಳಿದ.

"ಏನು ನೀನು ಅದನ್ನು ಮಾಡುತ್ತೀಯಾ?" ಸಾಮ್ರಾಟ ತನ್ನೆರಡು ಹುಬ್ಬುಗಳನ್ನು ಹತ್ತಿರ ತಂದು ರೈತನನ್ನು ತೀಕ್ಷ್ಣವಾಗಿ ನೋಡುತ್ತ ಆತನ ಎದೆಗಾರಿಕೆಗೆ ಚಕಿತನಾಗಿ ಪ್ರಶ್ನಿಸಿದ.

"ನನ್ನ ಸಹಾಯವು ಸಾಮ್ರಾಟರಿಗೆ ಹಿಡಿಸಬಹುದೆ?" ರೈತ ಅತ್ಯಂತ ವಿನಮ್ರತೆಯಿಂದ ಕೇಳಿದ. "ಬೇಯಿಸಿದ ಅನ್ನವನ್ನು ನಾನು ಸಿದ್ಧಪಡಿಸಬಹುದೆಂದು ಭಾವಿಸಿದ್ದೇನೆ."

ರೈತ 'ಅನ್ನ' ಮಾಡುವ ಪ್ರಯತ್ನ ನಡೆಸಬಹುದೆಂದು ಸಾಮ್ರಾಟ ಆಜ್ಞಾಪಿಸಿದ.

ರೈತ ಕೋಳಿಯೊಂದನ್ನು ತೆಗೆದುಕೊಂಡು ಅದರ ಹೊಟ್ಟೆಯನ್ನು ಖಾಲಿಮಾಡಿ ನೀರಿನಿಂದ ಸ್ವಚ್ಛವಾಗಿ ತೊಳೆದು ಅದರಲ್ಲಿ ಒಂದೊರಟಾಗಿದ್ದ ಜಿಗುಟಾದ ಅಕ್ಕಿಯನ್ನೂ ನೀರನ್ನುಬೆರೆಸಿ ಬೆಂಕಿಯ ಮೇಲಿಟ್ಟ. ಕೋಳಿಯು ಸುಡುತ್ತಿರುವಂತೆ ಅದರಲ್ಲಿಯ ಅಕ್ಕಿಯೂ ಬೆಂದಿತ್ತು.

ಲ್ಯಾಯಿಯ ಈ ವಿಜಯವನ್ನು ತಿಳಿದು ದೊರೆಗೆ ಹೇಗೆ ಹೇಗೋ ಆಯಿತು. ಏನೋ ನಷ್ಟವಾದಂತೆನಿಸಿತು. ಯಾಕೆಂದರೆ ಈ ನಮ್ಮ ರೈತ ಪಾಪದಷ್ಟು ಕುರೂಪಿಯಾಗಿದ್ದ. ಹೀಗಾಗಿ ಸಾಮ್ರಾಟನು ರಾಜ ಸೇವಕರಿಗೆ ಆಜ್ಞೆಗಳನ್ನಿತ್ತು ರೈತನಿಂದ ತನ್ನ ಮಗಳೊಡನೆ ಪಾಣಿಗ್ರಹಣವಾಗದಂತೆ ಎಚ್ಚರಿಕೆ ವಹಿಸಬೇಕೆಂದು ತಿಳುಹಿಸಿದ.

ಲ್ಯಾ ಬೇಯಿಸಿದ ಅನ್ನದ ಪ್ರಮಾಣ ಒಂದು ಚಿಕ್ಕ ಮಗುವಿಗೆ ಕೂಡಾ ಸಾಲದೆಂದೂ, ವ್ಯವಹಾರದಲ್ಲಿ ಅತನ ಪ್ರಯತ್ನ ಫಲಕಾರಿಯಾಗದೆಂದೂ ನಿಷ್ಪ್ರಯೋಜಕ ಕಾರ್ಯವೆಂದೂ ಲ್ಯಾಗೆ ತಿಳುಹಿಸಲ್ಪಟ್ಟಿತು.

ಸಾಮ್ರಾಟನ ಈ ಅವಿಶ್ವಾಸೀ ನಡತೆಯಿಂದ ನಿರಾಶೆಗೊಂಡ ಲ್ಯಾ ಮನೆಗೆ ಮರಳಿ ಪ್ರಯೋಗಗಳನ್ನು ನಡೆಸಿ ಇನ್ನೊಂದು ಹೊಸವಿಧಾನವನ್ನು ಕಂಡುಹಿಡಿದ.

ಮತ್ತೆ ರಾಜಧಾನಿಗೆ ಮರಳಿ, ಸಾಮ್ರಾಟನ ಹತ್ತಿರ ಬಿದಿರಬೊಂಬನ್ನು ಪಡೆದು ಅದರಲ್ಲಿ ಅಕ್ಕಿ ನೀರುಗಳನ್ನು ಒಂದು ರಾತ್ರಿಯೆಲ್ಲ ಇಟ್ಟು ಇಜ್ಜಲಿನ ಬೆಂಕಿಯ ಮೇಲೆ ಅದರಲ್ಲಿಯ ಅಕ್ಕಿಯನ್ನು ಬೇಯಿಸಿದ. ಆತನ ಈ ವಿಧಾನದಿಂದ ಸುಮಾರು ನೂರು ಜನರಿಗೆ ಸಾಲುವಷ್ಟು ಅನ್ನವನ್ನು ಬೇಯಿಸಬಹುದಾಗಿತ್ತು. ಈ ರೈತನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡಲು ಸಾಮ್ರಾಟನಿಗೆ ಇಷ್ಟವೇ ಇಲ್ಲದುದರಿಂದ ಅವನಿಗೀಗ ಇನ್ನಿಷ್ಟೂ ತೊಂದರೆಯೆನಿಸಿತು, ಪೇಚಿಗೆ ಬಿದ್ದಂತೆನಿಸಿತು. ಮತ್ತೆ ತನ್ನ ಅಧಿಕಾರಿಗಳನ್ನು ಸಲಹೆಗಾಗಿ ಕರೆಸಿಕೊಂಡ.

ಜಿಗುಟಾದ ಅಕ್ಕಿಯನ್ನು ಆಹಾರವಾಗಿ ಸೇವಿಸುವ ಜನರು ಒಂದು ಮಿತಿಗೆ ಒಳಪಟ್ಟಿರುವದರಿಂದಲೂ ಸಾಮಾನ್ಯ ಅಕ್ಕಿಯನ್ನು ಆತ ಬೇಯಿಸಲಿಲ್ಲವಾದ್ದರಿಂದಲೂ ಅವನ ಈ ಕರ್ತೃತ್ವ ಶಕ್ತಿಯನ್ನು ಪರಿಗಣಿಸುವುದು ಸಾಧ್ಯವಿಲ್ಲವೆಂದೂ ಲ್ಯಾಗೆ ತಿಳುಹಿಸಲಾಯಿತು.

"ನಿಮ್ಮನ್ನು ಸಮಾಧಾನಪಡಿಸುವದಕ್ಕಾಗಿ ನನ್ನೆಲ್ಲ ಶಕ್ತಿಯನ್ನು ವಿನಿಯೋಗಿಸುವೆ ಸಾಮ್ರಾಟರೆ" ಎಂದು ಲ್ಯಾ ಹೇಳಿ ಮತ್ತೆ ದುಃಖದಿಂದ ಹೊರಟು ಹೋದ.

ಆದರೆ ಆತನ ಮುಂದಿನ ಪ್ರಯತ್ನಗಳೆಲ್ಲ ವಿಫಲವಾದುವು, ಸಾಮ್ರಾಟನ ಆಜ್ಞೆಯನ್ನು ಪೂರೈಸುವದಾಗಲೀ ಇಲ್ಲ. ಇಷ್ಟೇ ಅಲ್ಲ, ಅವನಿಗೆ ಗಲ್ಲು ಶಿಕ್ಷೆಯನ್ನೇ ಕೊನೆಗೆ ವಿಧಿಸಲಾಯಿತು. ಆದರೆ ವೃದ್ಧ ಆಲೋಚಕನೊಬ್ಬ ಸಾಮ್ರಾಟನೆದುರು ಮೊಳಕಾಲೂರಿ ಆಜ್ಞೆಯನ್ನು ರದ್ದುಗೊಳಿಸಬೇಕೆಂದು ಬಿನ್ನೈಸಿಕೊಂಡ. ಆಲೋಚಕ ಹೇಳಿದ:

"ಜಿಗುಟು ಅಕ್ಕಿಯನ್ನು ಬೇಯಿಸಿ ಅನ್ನ ಮಾಡುವುದರಲ್ಲಿ ಈ ರೈತ ಯಶಸ್ವಿಯಾಗಿದ್ದಾನೆ. ಈತನ ಸಾಧನೆ ಅಪೂರ್ಣವಾಗಿದ್ದರೂ ನಿಮ್ಮ ಕನಸನ್ನು ನನಸಾಗಿಸಲು ಬೇರೆಯವರಿಗೆ ದಾರಿ ಹಾಕಿಕೊಟ್ಟಂತಾಗಿದೆ ಪ್ರಭುವೆ" ಎಂದ.

ಸಾಮ್ರಾಟನು ಆಗ ಒಂದಿಷ್ಟು ಶಾಂತಚಿತ್ತನಾಗಿ ಯೋಚಿಸಿ ಲ್ಯಾಯನ್ನು ಶಿಕ್ಷೆಯಿಂದ ಮುಕ್ತಗೊಳಿಸಿದ.

ಕೆಲದಿನಗಳ ಬಳಿಕ ಟ್ರೊಂಗ್ ಎಂಬ ರೈತನು ಲ್ಯಾಯ ಪದ್ಧತಿಯನ್ನೇ ಒಂದಿಷ್ಟು ಪರಿಷ್ಕರಿಸಿದ. ಈತ ಅಕ್ಕಿ ನೀರುಗಳನ್ನು ಬೆರಸಿಡಲು ಒಂದು ಮಣ್ಣಿನ ಮಡಕೆಯನ್ನು ಉಪಯೋಗಿಸಿದ ಈ ಮಣ್ಣಿನ ಮಡಕೆಯನ್ನು ಮರದ ರೆಂಬೆಯೊಂದಕ್ಕೆ ನೇತುಹಾಕಿ ಕೆಳಗೆ ಉರಿ ಹಚ್ಚಿದ. ಈ ಹೊಸ ಸಂಶೋಧನೆಯನ್ನು ಸಾಮ್ರಾಟನ ಮುಂದೆ ಪ್ರಯೋಗಿಸಲಾಯಿತು. ಟ್ರೊಂಗ್‌ನನ್ನು ನೋಡಿದಾಗ ಸಾಮ್ರಾಟನಿಗೆ ಇನ್ನೂ ಬೇಸರವಾಯಿತು. ಯಾಕೆಂದರೆ ಆತನ ಮುಖ ಲ್ಯಾಯ ಮುಖಕ್ಕಿಂತಲೂ ಕುರೂಪವಾಗಿತ್ತು !

ಸಾಮ್ರಾಟ ಈಗ ಇನ್ನೊಂದು ಉಪಾಯ ಹುಡುಕಿದ. ದೇಶಾದ್ಯಂತ ಈ ಸ್ಪರ್ಧೆಯನ್ನು ಏರ್ಪಡಿಸಿ ಕೆಸರಿನ ಹೊಲದಲ್ಲಿ ಓಡಾಡುತ್ತಿರುವಂತೆಯೇ ಅನ್ನವನ್ನು ಬೇಯಿಸುವವರಿಗೆ ತನ್ನ ಮಗಳನ್ನು ಕೊಡುವದಾಗಿ ಸಾರಿದ. ಸಿಂಹಾಸನಕ್ಕೆ ಹಕ್ಕುದಾರರಾಗಬೇಕೆಂದು ಆಶಿಸಿದ್ದ, ಆ ರೈತರಿಬ್ಬರ ಆಶೆಯನ್ನು ಈ ಉಪಾಯ ಕೊಲ್ಲುತ್ತದೆಯೆಂದು ಸಾಮ್ರಾಟ ಭಾವಿಸಿದ.

ರಾಜ್ಯದ ಎಲ್ಲಾ ಭಾಗಗಳಿಂದಲೂ ಸ್ಪರ್ಧಾಳುಗಳು ಇದರಲ್ಲಿ ಭಾಗವಹಿಸಿದರು. ಇದರಲ್ಲಿ ಅನೇಕ ಪಂಡಿತರುಗಳು ಕೂಡಾ ಭಾಗವಹಿಸಿದರು. ಆದರೆ ಕೊನೆಗೆ ಯಶಸ್ವಿಗಳಾದವರೆಂದರೆ ಟ್ರೊಂಗ್ ಮತ್ತು ಲ್ಯಾ ಇವರುಗಳೇ !

ಈ ರೈತರುಗಳಿಂದ ಬಿಡುಗಡೆ ಹೊಂದುವ ಕೊನೆಯ ಪ್ರಯತ್ನವಾಗಿ ಸಾಮ್ರಾಟನು ಲ್ಯಾ ಮತ್ತು ಟ್ರೊಂಗ್‌ರು ದೊಡ್ಡದೊಂದು ಪಾತ್ರೆಯನ್ನು ಎತ್ತಿ ಹಿಡಿಯುವಂತೆಯೂ ರಾಜಕುಮಾರಿಯು ಅದರ ಕೆಳಗೆ ಉರಿಹಚ್ಚುವಂತೆಯೂ ಇದರಿಂದ ಅದರಲ್ಲಿ ಅನ್ನವಾಗಬೇಕೆಂದೂ ಸಾಮ್ರಾಟ ಆಜ್ಞಾಪಿಸಿದ.

ಆದರೆ ರಾಜಕುಮಾರಿ ತನ್ನಷ್ಟಕ್ಕೆ ತಾನೆ ಹೇಳಿಕೊಂಡಳು. "ಈ ರೈತರು ಕುರೂಪಿಗಳಾಗಿ ಕಾಣಬಹುದು, ಆದರೆ ಪ್ರತಿಭಾವಂತರು. ಅವರ ಸಾವು ದೇಶಕ್ಕೊಂದು ದೊಡ್ಡ ನಷ್ಟ. ಈಗ ತಂದೆಯ ಆಜ್ಞೆಯನ್ನು ಪಾಲಿಸದೆ ವಿಧಿಯಿಲ್ಲ. ಇದರಲ್ಲಾರು ಬದುಕುಳಿಯುವವರೋ ಅವರೇ ನನ್ನ ಪತಿಯಾಗುವರು."

ತುಂಬಾ ಹೊತ್ತು ಸುಮ್ಮನಿದ್ದು ರಾಜಕುಮಾರಿ ಕೊನೆಗೆ ಸೌದೆಯನ್ನೂ ಒಣ ಹುಲ್ಲನ್ನೂ ಸೇರಿಸಿ ಬೆಂಕಿ ಇಟ್ಟಳು. ಈ ಉಷ್ಣತೆಯನ್ನು ಸಹಿಸಲಿಕ್ಕಾಗದೆ ಲ್ಯಾ ಮತ್ತು ಟ್ರೊಂಗ್ ಇಬ್ಬರೂ ಬೆಂದು ಸತ್ತು ಹೋದರು. ರಾಜಕುಮಾರಿ ಅವರಿಬ್ಬರನ್ನು ರಕ್ಷಿಸಲು ಎಷ್ಟೋ ಪ್ರಯತ್ನಪಟ್ಟಳು. ಆದರೆ ಆಕೆ ಕೂಡ ಅಗ್ನಿಗೆ ಆಹುತಿಯಾಗಿ ಹೋಗಬೇಕಾಯಿತು.

ಇದರಿಂದ ತುಂಬಾ ದುಃಖಿತರಾದ ಸ್ವರ್ಗದ ಸಾಮ್ರಾಟ ಜೇಡ್‌ರು ಇಬ್ಬರು ರೈತರನ್ನೂ, ರಾಜಕುಮಾರಿಯನ್ನೂ ಅನ್ನದ ಅಧಿದೇವತೆಯರನ್ನಾಗಿಸಿದರು, ಮತ್ತು ಅವರ ಸ್ಮರಣಾರ್ಥವಾಗಿ ಜನರು ಪಾತ್ರೆಗೆ ಮೂರು ಉಬ್ಬು (ಕಾಲುಗಳನ್ನು) ನಿರ್ಮಿಸಿದರು. ಮತ್ತು ಅಂದಿನಿಂದ ಬೇಯಿಸಿದ ಅನ್ನವೇ ಜನತೆಯ ಪ್ರಮುಖ ಆಹಾರವಾಯಿತು.

ಅಡಿಗೆ ಮಾಡುವುದು ಮೊದಲು ಎಲ್ಲಿ ಗೊತ್ತಿತ್ತು? ಅನ್ನ ಬೇಯಿಸುವುದು ಎಲ್ಲಿ ಗೊತ್ತಿತ್ತು ?

ಅದಕ್ಕೂ ಬಡ, ಆದರೆ ಬುದ್ಧಿವಂತ ರೈತರೇ ಬಲಿದಾನ ತೆತ್ತರು.

ಆದರೆ ರೈತರ ಈ ಶೋಧನೆಯ ಬಗ್ಗೆ ಸಾಮ್ರಾಟ ಇತ್ತ ಕಾಣಿಕೆ ಎಂಥದು ?

ಅಂತೆಯೇ ಇಂದು ಅನ್ನ ಜನತೆಯ ಪ್ರಮುಖ ಆಹಾರವಾಗಿದೆ.

ಇದು ವಿಯೆತ್‌ನಾಮಿನ ಸ್ವಾರಸ್ಯಕರವಾದ ದಂತ ಕತೆ.....

'ಜನಶಕ್ತಿ'
ಕಾಶೀ ವಿಶ್ವೇಶ್ವರ ಗುಡಿ ಬೀದಿ,
ಬೆಂಗಳೂರು ೨

ಪ್ರಗತಿಶೀಲ ಕನ್ನಡ ವಾರಪತ್ರಿಕೆಗೆ
ಇಂದೇ ಚಂದಾದಾರರಾಗಿರಿ

ಚಂದಾ ವಿವರ :
ವಾರ್ಷಿಕ ಚಂದಾ ರೂ. 6—00
ಅರ್ಧ ವಾರ್ಷಿಕ ರೂ. 3—00
ಬಿಡಿ ಪ್ರತಿ 13 ನಯಾಪೈಸಾ

ರೈತರೇ ತಮ್ಮ ಸಮಸ್ಯೆಗಳ ನಿವಾರಣೆಗೆ ಸಿದ್ಧರಾಗಬೇಕು

ಹುಲ್ಕುಂಟೆ ರೈತ ಸಂಘದ ಸಭೆಯಲ್ಲಿ ಕರೆ

ತಾರೀಖು 8—6—58 ನೇ ಭಾನುವಾರ ಸಂಜೆ 8 ಗಂಟೆಗೆ ದೊಡ್ಡಬಳ್ಳಾಪುರದ ತಾಲ್ಲೂಕು ಬೆಳವಂಗಳ ಹೋಬಳಿ ಹುಲ್ಕುಂಟೆ ಗ್ರಾಮದಲ್ಲಿ ಸ್ಥಳದ ರೈತಸಂಘದವರು ಬಹಿರಂಗ ಸಭೆ ಏರ್ಪಡಿಸಿದ್ದರು. ಸಭೆಯಲ್ಲಿ 500 ಕ್ಕೂ ಮೇಲ್ಪಟ್ಟ ರೈತರು ನೆರೆದಿದ್ದರು. ತಾಲ್ಲೂಕು ರೈತಸಂಘದ ಅಧ್ಯಕ್ಷರಾದ ಶ್ರೀ ಎಚ್. ಮುಗುವಾಳಪ್ಪನವರು ಅಧ್ಯಕ್ಷತೆ ವಹಿಸಿದ್ದರು. ತಾಲ್ಲೂಕು ರೈತಸಂಘದ ಕಾರ್ಯದರ್ಶಿಗಳಾದ ಶ್ರೀ ಡಿ. ವಿ. ಗಂಗಾಧರವರು ಮಾತನಾಡುತ್ತಾ "ಕಾಂಗ್ರೆಸ್ಸಿನ ಹನ್ನೊಂದು ವರ್ಷದ ಆಡಳಿತದಿಂದ ಯಾವ ಹಳ್ಳಿಯೂ ಪ್ರಗತಿ ಹೊಂದಿಲ್ಲ, ಬಡತನ, ನಿರುದ್ಯೋಗ ದಿನ ದಿನಕ್ಕೂ ಜಾಸ್ತಿಯಾಗುತ್ತಿವೆ". ಎಂದು ಹೇಳಿ ರೈತರು ಸಂಘಟಿತರಾದರೆ ರೈತ ಸಮಸ್ಯೆಗಳು ಬಿಡುವುದು ಸಾಧ್ಯವೆಂದು ತಿಳುಹಿಸಿ ರೈತಸಂಘವನ್ನು ಬಲಪಡಿಸಬೇಕೆಂದು ಕೇಳಿಕೊಂಡರು.

ನಂತರ ಕ. ಪ್ರಾ. ರೈತಸಂಘದ ಉಪ ಕಾರ್ಯದರ್ಶಿಗಳಾದ ಶ್ರೀ ರಾಮಭದ್ರಯ್ಯನವರು ರೈತರು ಹಾಗು ಕಾರ್ಮಿಕರ ಚಳುವಳಿ ಬಗ್ಗೆ ವಿವರಗಳನ್ನು ಕೊಡುತ್ತಾ ಕೇರಳ ಸರ್ಕಾರದ ಪ್ರಗತಿಯ ಬಗ್ಗೆ ಮಾತನಾಡಿ ಎಲ್ಲರನ್ನು ಸಂಘಕ್ಕೆ ಸದಸ್ಯರಾಗಲು ಪ್ರಾರ್ಥಿಸಿದರು. ಕೊನೆಯಲ್ಲಿ ಅಧ್ಯಕ್ಷರು ಮಾತನಾಡುತ್ತಾ, ದೇಶದ ಅದ್ಯಂತ ರೈತನ ಸಮಸ್ಯೆಗಳು ದಿನ, ದಿನ ಬೆಳೆಯುತ್ತಿವೆ. ಆರೂಡಿಯಲ್ಲಿ ಜೋಡಿಗ್ರಾಮದ ಸಮಸ್ಯೆ, ಬೀಡಕೆರೆಯಲ್ಲಿ ಎಂಟು ವರ್ಷಗಳಿಂದ ಕೆರೆ ಕೋಡಿ ಉತಾವಣೆಯಿಲ್ಲದೆ ರೈತರಿಗೆ ಫಸಲು ನಷ್ಟ, ಹುಲ್ಕುಂಟೆಯಲ್ಲಿ ಗೋಮಾಳದ ಸಮಸ್ಯೆ, ಸುಮಾರು 650 ಎಕರೆ ಗೋಮಾಳ ಇದ್ದು ಊರಿನ ದನ ಮೇವಿಗೆ ಹಾಹಾಕಾರ ಪಡುತ್ತಿವೆ. ಒಂದೇ ಕುಟುಂಬದವರು ಮನೆ ಮಕ್ಕಳ ಹೆಸರಿನಲ್ಲೆಲ್ಲಾ ಅರ್ಜಿಕೊಟ್ಟು ನೂರು ಎಕರೆ ಜಮೀನು ಲಪಟಾಯಿಸಿದ್ದಾರೆ. ಎಲ್ಲಾ ಜಮೀನು ನೂರು ಇನ್ನೂರು ಕಂದಾಯ ಕೊಡುವಂಥವರಿಗೆ ಈ ಊರಲ್ಲಿ ಅಂಗುಲ ಜಮೀನೂ ಇಲ್ಲದ ಜನ ಇದ್ದಾರೆ, ಅವರನ್ನ ಕೇಳುವವರೇ ಇಲ್ಲ. ಈ ಊರಲ್ಲಿ ಶ್ಯಾನುಭೋಗರು, ಪಟೇಲರದೆ ರಾಜ್ಯವಂತೆ, ಅನೇಕ ಬಡಪಾಯಿಗಳು ಜಮೀನು ಪಡೆಯಲು ಹಣ ಕಳಕೊಂಡು ಸಾಲ ಸೋಲಕ್ಕೆ ಸಿಕ್ಕಿದ್ದಾರೆ. ಇದು ಇನ್ನು ಹೀಗೇ ಮುಂದುವರಿಯಲಾಗದು, ಕೂಡಲೇ ಬಗೆಹರಿಯಬೇಕು. ಜಮೀನಿಲ್ಲದವರಿಗೆ ಜಮೀನು ಸಿಕ್ಕಬೇಕು. ದನಗಳ ಮೇವಿಗೆ ಗೋಮಾಳಬೇಕು. ರೈತರು ಸಂಘಟಿತರಾಗದ ಹೊರತು ಈ ಸಮಸ್ಯೆ ಬಗೆಹರಿಯುವುದಿಲ್ಲ. ಅದಕ್ಕಾಗಿ ಎಲ್ಲರೂ ಸಂಘಕ್ಕೆ ಸದಸ್ಯರಾಗಬೇಕೆಂದು ಕೋರಿದರು. ಜಯಕಾರಗಳೊಂದಿಗೆ ಸಭೆ ಬರಖಾಸ್ತಾಯಿತು.

ಪುನರ್ರೂಪಿತ ಯೋಜನೆ —

(೫ನೇ ಪುಟದಿಂದ)

ವು 300 ಕೋಟಿ ರೂ.ಗಳು. ಇದರಲ್ಲಿ 1356-57ರಲ್ಲಿ ದೊರಕಿದ್ದು 38ಕೋಟಿ ರೂ ಮತ್ತು 1957-58 ರಲ್ಲಿ 100ಕೋಟಿರೂ. ಇಲ್ಲಿ ಕೊಡಲಾಗಿರುವ ಅಂಕಿಗಳಿಗೂ ನಿಜವಾಗಿ ಉಪಯೋಗಿಸಿಕೊಂಡಿರುವ ವಿದೇಶೀ ನೆರವಿಗೂ ಸಹ ಬೇಕಾದಷ್ಟು ವ್ಯತ್ಯಾಸವಿದೆ. ಈ ವಿಷಯದಲ್ಲಿಯೂ ಸಹ ನಮ್ಮ ಎಣಿಕೆಯು ಕೇವಲ ಊಹೆಯ ಮೇಲಿದೆ.

ಅಧಿಕ ತೆರಿಗೆ

ಅಧಿಕ ತೆರಿಗೆಯಿಂದ ವರಮಾನ ಪಡೆಯುವ ಅವಕಾಶ ತೀರ ಕಡಿಮೆಯಿದೆ. ಈಗಾಗಲೇ ಸಾಕಷ್ಟು ಭಾರವಾದ ಹೊರೆ ಜನತೆಯ ಮೇಲಿದೆ. ದ್ವಿತೀಯ ಯೋಜನೆಯ ಕಾಲಾವಧಿಯಲ್ಲಿ ಅಧಿಕ ತೆರಿಗೆಯಿಂದ ವರಮಾನವು 450 ಕೋಟಿ ರೂ.ಗಳು ಅಂದರೆ ಕೇಂದ್ರದಲ್ಲಿ 225 ಕೋಟಿ ರೂ. ರಾಜ್ಯ ಸರಕಾರಗಳಲ್ಲಿ 225 ಕೋಟಿ ರೂ. ಎಂದು ಅಂದಾಜು ಮಾಡಲಾಗಿತ್ತು. ಸರಕಾರ ಈವರೆಗೆ ತಂದಿರುವ ತೆರಿಗೆಗಳನ್ನು ಸೇರಿಸಿ ತೆರಿಗೆಯಿಂದ ಕೇಂದ್ರದ ಒಟ್ಟು ಆದಾಯವು ಐದು ವರ್ಷಗಳಲ್ಲಿ 225ಕೋಟಿ ರೂಗಳಾಗುತ್ತವೆ, ಅಂದರೆ ಯೋಜನೆಯ ಅಂದಾಜಿಗಿಂತಲೂ ಹೆಚ್ಚಾಗಿದೆ. ರಾಜ್ಯ ಸರಕಾರಗಳಲ್ಲಿ ಅಧಿಕ ತೆರಿಗೆಯ ಆದಾಯವು 173ಕೋಟಿ ರೂಗಳಾಗಿವೆ, ಅಂದರೆ ಐದು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯಲ್ಲಿ ನಮೂದಿಸಿರುವುದಕ್ಕಿಂತ 52ಕೋಟಿ ರೂ ಕಮ್ಮಿಯಿದೆ.

ಸರಕಾರದ ತೆರಿಗೆ ನೀತಿಯನ್ನು ಸ್ವಭಾವವು ಯೋಜನೆಗೇ ಬಾಧಕವಾಗುವಂತಿದೆ. ತೆರಿಗೆಯಲ್ಲಿನ ಅಧಿಕ ಹೊರೆ ಜನಸಾಮಾನ್ಯರ ತಲೆಯಮೇಲೆ ಹೇರಲಾಗಿದೆ. ಸಿರಿವಂತರು ಮತ್ತು ಕಂಪೆನಿಗಳ ಮೇಲೆ ಬೀಳುವ ಪ್ರತ್ಯಕ್ಷ ತೆರಿಗೆ ಕ್ರಮವು ಅಲ್ಪವಾಗಿದ್ದು, ಪರೋಕ್ಷ ತೆರಿಗೆಯು ಅತ್ಯಧಿಕವಾಗಿದೆ. ಕೆಳಗಿನ ಅಂಶಗಳನ್ನು ಗಮನಿಸಿದಲ್ಲಿ ಅದು ವ್ಯಕ್ತವಾಗುತ್ತದೆ:

ರಾಜ್ಯ ಸರಕಾರಗಳಲ್ಲಿ ಪ್ರತ್ಯಕ್ಷ ತೆರಿಗೆಯು ಕೇವಲ ವ್ಯವಸಾಯ ಆದಾಯ ತೆರಿಗೆಗಷ್ಟೇ ನೇಮಿತವಾಗಿದೆ ಪರಿಸ್ಥಿತಿ ಈ ರೀತಿ ಇರುವಾಗ ಹೊಸ ತೆರಿಗೆಗೆ ಅವಕಾಶವೆಲ್ಲಿ ಆದ್ದರಿಂದಾಗಿ, ಮೇಲಿನ ಅಂಶಗಳನ್ನು ಗಮನಿಸಿದಲ್ಲಿ ಯೋಜನಾ ಆಯೋಗವು, ಯೋಜನೆಯ ಕೊನೆಯ ಎರಡು ವರ್ಷಗಳಲ್ಲಿ ನಿರೀಕ್ಷಿಸುತ್ತಿರುವ ಆದಾಯವು ಕೇವಲ ಕನಸಿನ ಲೆಖ್ಖಾಚಾರವಾಗಿದೆ ಎಂಬುದು ತಿಳಿದು ಬರುತ್ತದೆ. ಇದರಿಂದ ಸರಕಾರವು ಯೋಜನಾ ಬದ್ಧವಾದ ಬೆಳವಣಿಗೆಗೆ ಸಿದ್ಧವಿಲ್ಲ ಎಂಬುದು ವ್ಯಕ್ತವಾಗುತ್ತದೆ.

["ನ್ಯೂ ಏಜ್" ವಾರಪತ್ರಿಕೆಯಲ್ಲಿ ಶ್ರೀ ಕೆ. ಪಿ ಸುಬ್ರಮಣ್ಯ ಮೆನನ್‌ರವರ ಲೇಖನದ ಆಧಾರದಿಂದ]

ಹೊಸ ತೆರಿಗೆಯಿಂದ ಕೇಂದ್ರ ಸರಕಾರದ ವರಮಾನ

	ಕೋಟಿ ರೂಪಾಯಿಗಳಲ್ಲಿ	
ವರ್ಷದಲ್ಲಿನ ಹೊಸ	1956—57	1957—58
ತೆರಿಗೆಗಳಿಂದ ವರಮಾನ	90·5	72·6
ಪ್ರತ್ಯಕ್ಷ ತೆರಿಗೆಯಿಂದ	12·6 (13%)	17·8 (24%)
ಪರೋಕ್ಷ ತೆರಿಗೆಯಿಂದ	77·9 (87%)	54·8 (76%)

ಪಾರ್ಟಿಗೆ ಧನಸಹಾಯ

ಚಿಕ್ಕಮಗಳೂರಿನ ಪ್ರಮುಖ ವಕೀಲರಾದ ಸುಂದರರಾವ್‌ರವರ ಪುತ್ರ ಚಿ॥ ದಿನಕರ ರಾವ್ ಇವರ ವಿವಾಹವು 22-5-'58ರಂದು ಬೊಂಬಾಯಿಯಲ್ಲಿ ನಡೆಯಿತು. ವಿವಾಹದ ಅಂಗವಾಗಿ ಚಿಕ್ಕಮಗಳೂರಿನಲ್ಲಿ ತಾ. 1—6—58ರಂದು ಅಂತಕ್ಷತೆಯ ಸಮಾರಂಭದಲ್ಲಿ ಗೆಳೆಯ ಶ್ರೀ ದಿನಕರ್ ರಾವ್‌ರವರು ಭಾರತ ಕಮ್ಯೂನಿಸ್ಟ್ (ಚಿಕ್ಕಮಗಳೂರು ಶಾಖೆ) ಪಾರ್ಟಿಗೆ 100 ರೂಪಾಯಿಗಳನ್ನು ಕೊಟ್ಟರು.

ಕಾರ್ಮಿಕ ಪ್ರತಿನಿಧಿಗಳ ಸಭೆ

ಬೆಂಗಳೂರು ಉತ್ತರ ಪ್ರದೇಶ ಕಾರ್ಖಾನೆಗಳ ಕಾರ್ಮಿಕರ ಪ್ರತಿನಿಧಿಗಳ ಸಭೆಯು ತಾ. 9—6—58ರ ಸಂಜೆ ಯಶವಂತಪುರದಲ್ಲಿ ಪ್ಲೈವುಡ್ ಕಾರ್ಮಿಕ ಸಂಘದ ಕಛೇರಿಯಲ್ಲಿ ಸೇರಿದ್ದಿತು. ಹಿಂದೂಸ್ಥಾನ್ ಮೆಷಿನ್ ಟೂಲ್ಸ್, ಭಾರತ್ ಎಲೆಕ್ಟ್ರಾನಿಕ್ಸ್, ಪ್ಲೈವುಡ್ ಫ್ಯಾಕ್ಟರಿ, ಮಹಾಲಕ್ಷ್ಮಿ ಮಿಲ್ಸ್, ಹ್ಯೂಮ್ ಪೈಪ್ ಕಂಪೆನಿ, ಬಿ. ಸಿ. ಎಂ. ಕಂಪೆನಿ, ಫೈರ್ ಬ್ರಿಕ್ಸ್ ಅಂಡ್ ಪಾಟರೀಸ್, ಜಯಲಕ್ಷ್ಮಿ ಟೈಲ್ಸ್, ಕಾರ್ಖಾನೆಗಳ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಸಭೆಯಲ್ಲಿ ಹಾಜರಿದ್ದರು. ಫೈರ್ ಬ್ರಿಕ್ಸ್ ಅಂಡ್ ಪಾಟರೀಸ್ ಕಾರ್ಖಾನೆ 44 ದಿನಗಳಿಂದ ಅಕ್ರಮ ಲಾಕೌಟಾಗಿ ಕಾರ್ಮಿಕರೆಲ್ಲರೂ ಕಾರ್ಖಾನೆಯೊಳಗೆ ಕುಳಿತು ಇದ್ದುದರಿಂದ ಉದ್ಭವವಾಗಿರುವ ಪರಿಸ್ಥಿತಿಯನ್ನು ಸಭೆಯಲ್ಲಿ ಚರ್ಚಿಸಲಾಯಿತು. ಕೆಳಕಂಡ ತೀರ್ಮಾನವನ್ನು ಸರ್ವಾನುಮತದಿಂದ ತೆಗೆದುಕೊಳ್ಳಲಾಯಿ.

ಫೈರ್ ಬ್ರಿಕ್ಸ್ ಮತ್ತು ಪಾಟರೀಸ್ ಕಾರ್ಖಾನೆ 44 ದಿನಗಳಿಂದ ಲಾಕೌಟಾಗಿದ್ದರೂ ಕೂಡ, ಕಾರ್ಖಾನೆ ತೆರೆಯುವಂತೆ ಮಾಡಲು ಸರ್ಕಾರ-ಮಾಲಿಕರ ಮೇಲೆ ಒತ್ತಾಯ ತರಲು ನಿಶ್ಯಕ್ತವಾಗಿದೆಯೆಂದು ತಿಳಿಯಪಡಿಸಲು ಈ ಸಭೆಯು ವಿಷಾಧಪಡುತ್ತದೆ. ಸರ್ಕಾರ ಈ ಕೂಡಲೇ ಕಾರ್ಮಿಕರ ವಿವಾದ ಶಾಸನದ 10 (3) ಸೆಕ್ಷನ್ ಪ್ರಕಾರ ಲಾಕೌಟನ್ನು ನಿಷೇಧಿಸಬೇಕೆಂದು ಸರ್ಕಾರನ್ನು ಈ ಸಭೆಯು ಒತ್ತಾಯಪಡಿಸುತ್ತದೆ. ಈ ತಿಂಗಳ 14ನೆ ತಾರೀಕಿನೊಳಗೆ ಫೈರ್ ಬ್ರಿಕ್ಸ್ ಮತ್ತು ಪಾಟರೀಸ್ ಸಮಸ್ಯೆ ಇತ್ಯರ್ಥವಾಗದಿದ್ದಲ್ಲಿ, ಮಾಲೀಕರ ಮತ್ತು ಸರ್ಕಾರದ ಮೇಲೆ ಒತ್ತಾಯ ತರಲು ಪ್ರತಿನಿಧಿತ ಸಂಘಗಳೆಲ್ಲವೂ ಸೇರಿ ನೇರ ಕಾರ್ಯಕ್ರಮ ಕೈಗೊಳ್ಳುವರೆಂದೂ, ಅನೇಕ ಕಾರ್ಯಕ್ರಮವನ್ನು ಮುಂದೆ ತಿಳಿಸಲಾಗುವುದೆಂದೂ ಈ ಸಭೆಯು ತೀರ್ಮಾನಿಸಿರುತ್ತದೆ.

ರಷ್ಯಾದಲ್ಲಿ—

ಕಲಾವಿದರಿಗೆ - ವಿಜ್ಞಾನಿಗಳಿಗೆ ಹೆಚ್ಚು ಗೌರವ

"ಸೋವಿಯತ್ ರಷ್ಯಾದಲ್ಲಿ ರಾಜಕಾರಣಿಗಳಿಗಿಂತಲೂ ಕಲಾವಿದರಿಗೆ ಹೆಚ್ಚು ಗೌರವವಿದೆ" ಎನ್ನುತ್ತಾರೆ ಡಾ॥ ಬಿ. ಮುಖರ್ಜಿ.

ಭಾರತದ ಕೇಂದ್ರ ಔಷಧ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿರುವ ಡಾ॥ ಮುಖರ್ಜಿಯವರು ಕಳೆದ ವಾರವೇ ಸೋವಿಯತ್ ರಷ್ಯಾದಲ್ಲಿಯ ತಮ್ಮ ೨೫ ದಿನಗಳ ಸಂಚಾರವನ್ನು ಮುಗಿಸಿಕೊಂಡು ಬಂದು ಮೇಲಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಹದಿನೈದು ಜನ ವಿಜ್ಞಾನಿಗಳ ಮಂಡಲಿಯ ನಾಯಕರಾಗಿ ರಷ್ಯಾಕ್ಕೆ ತೆರಳಿದ್ದ ಡಾ॥ ಮುಖರ್ಜಿಯವರು ಇಡೀ ಪ್ರಪಂಚವನ್ನು ಎರಡು ಬಾರಿ ಸುತ್ತಿದ್ದಾರೆ, ಸಾಮಾನ್ಯವಾಗಿ ಪಶ್ಚಿಮದ ಪ್ರತಿಯೊಂದು ದೇಶವನ್ನೂ ನೋಡಿದ್ದಾರೆ.

"ನನಗೆ ಪ್ರಿಯವೆನಿಸುವ ಹಾಗೂ ಹೋಗಿ ಅಲ್ಲೇ ನೆಲೆಸಬೇಕೆನಿಸುವ ದೇಶವೆಂದರೆ ಸೋವಿಯತ್ ರಷ್ಯಾ" ಎನ್ನುತ್ತಾರೆ ಡಾ॥ ಮುಖರ್ಜಿ. ರಷ್ಯದ ಬಗ್ಗೆ ಅವರು ಹೀಗೆ ಅಭಿಪ್ರಾಯ ವ್ಯಕ್ತಪಡಿಸಲು ಕಾರಣಗಳಿಲ್ಲದೆ ಇಲ್ಲ. ಅವರು ಕೊಡುವ ಕಾರಣಗಳು ಹೀಗಿವೆ:

★ ರಷಿಯನ್ ಜನತೆ ಕಲಾವಿದರನ್ನು, ವಿಜ್ಞಾನಿಗಳನ್ನು, ಸೃಷ್ಟ್ಯಾತ್ಮಕ ಶ್ರಮಜೀವಿಗಳನ್ನು ತಮ್ಮ ರಾಜಕಾರಣಿಗಳಿಗಿಂತಲೂ ಹೆಚ್ಚಾಗಿ ಗೌರವಿಸುತ್ತಾರೆ ಅಕಡೆಮಿಷಿಯನ್ ನೊಬ್ಬನನ್ನು ಸ್ವಾಗತಿಸಲು ಕೇಂದ್ರದ ಮೂವರು ಸಚಿವರುಗಳು ಎದ್ದು ನಿಂತಿದ್ದರು.

★ ರಷ್ಯನ್ ವಿಜ್ಞಾನಿಗಳು ತಮ್ಮ ವಿಜ್ಞಾನವನ್ನು ಜನಸಮೂಹದ ಒಟ್ಟು ಹಿತಕ್ಕೆ ಕ್ಷೇಮಕ್ಕೆ ಬಳಸುತ್ತಿದ್ದಾರೆ. ಪ್ರಪಂಚದಲ್ಲೇ ಅತ್ಯಂತ ತೀವ್ರ ವೇಗದವೆನಿಸಿರುವ ಸೈನಿಕರ ಸಂಚಾರಕ್ಕೆ ಮಾತ್ರವೇ ಬಳಸಲ್ಪಡುವ ಜೆಟ್ ವಿಮಾನಗಳನ್ನು ಅಲ್ಲಿ ಜನರಿಗಾಗಿ ಬಳಸಲಾಗುತ್ತದೆ. ಇಂಥ ವಿಮಾನ ಸಂಚಾರ ಸೌಕರ್ಯ ಆಗಸ್ಟ್ ನಂತರ ಭಾರತಕ್ಕೆ ದೊರೆಯಲಿದೆ.

★ ತಾಷ್ಕೆಂಟ್ ಎಂಬುದು ಗಡಿಪ್ರಾಂತದಲ್ಲಿರುವ ಒಂದು ನಗರ. ರಷ್ಯದ ಬದಿಯಲ್ಲಿರುವ ಅವರ ಭಾಗ ಆಧುನಿಕ ಸೌಕರ್ಯಗಳಿಂದ ಕೂಡಿದ್ದಾಗಿದೆ. ಇನ್ನೊಂದು ಬದಿಯಲ್ಲಿ ಇನ್ನೂ ಓಬಿರಾಯನ ಕಾಲದ ರಸ್ತೆಗಳೇ ಇವೆ. ರಷ್ಯಾದ ಹಳ್ಳಿಗಾಡಿನ ಮಣ್ಣಿನ ಮನೆಗಳಲ್ಲಿ ಕೂಡ ಟೆಲಿವಿಷನ್ ಸೆಟ್‌ಗಳಿವೆ.

★ ಸೋವಿಯತ್ ಅಭಿವೃದ್ಧಿ ನಿಜವಾಗಿಯೂ ಪ್ರಶಂಸನೀಯವಾಗಿದೆ. ಅವರು ತಮಗೆ ದೊರೆತ ತಮ್ಮ ಮೂಲಗಳಿಂದಲೇ ದೇಶವನ್ನು ಅತ್ಯಂತ ತೀವ್ರಗತಿಯಿಂದ ಕಟ್ಟಿದರು. ಅವರಲ್ಲಿ ಅನುಕರಣೆ ಕೊಂಚ ಕಂಡರೂ—ಅವರ ಕಟ್ಟಡಗಳು ಅಮೆರಿಕೆಯ ಕಟ್ಟಡಗಳನ್ನು ನೆನಪಿಸಿದುವು—ಅವರ ಕಾರ್ಯವೇಗ ಅಶ್ಚರ್ಯಕರವಾದುದು. (ಪಿ.ಟಿ.ಐ.)

ಜನ ಮಾತನಾಡುತ್ತಿದ್ದಾರೆ

ಅಪಜಯದ ಕಾರ್ಗತ್ತಲಲ್ಲಿ ಜಯಪ್ರಕಾಶ

ಭಾರತೀಯ ಸೋಷಲಿಸ್ಟ್ ಗುಂಪಿನ ಮಹಾ ನಾಯಕರೆಂದು ಪರಿಗಣಿತರಾಗಿದ್ದ ಶ್ರೀ ಜಯಪ್ರಕಾಶ ನಾರಾಯಣರು ಇತ್ತೀಚೆಗೆ 'ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯ ಪ್ರತಿನಿಧಿಗೆ ಇತ್ತ ಸಂದರ್ಶನದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ನೋಡಿ ಚಕಿತರಾಗುವ ಬದಲು ನಾವು ಅವರ ಬಗ್ಗೆ ಕನಿಕರ ಪಡಬೇಕಾಗಿದೆ.

ನಿಶ್ಚಳವಾದ ಗುರಿ, ಧೀರವಾದ ಕಾರ್ಯಾಚರಣೆ ಇವುಗಳ ಅಭಾವದಿಂದ ಮಹಾ ಸೋಲನ್ನೊಪ್ಪಿಕೊಳ್ಳಬೇಕಾಗಿ ಬಂದಿರುವ ಭಾರತೀಯ ನಾಯಕರಲ್ಲಿ ಜಯಪ್ರಕಾಶರಿಗೇ ಮೊದಲನೆಯ ಸ್ಥಾನ ಸಲ್ಲುವದೇನೋ !

ಸೋಷಲಿಸ್ಟ್ ಪಕ್ಷವನ್ನು ಸರಿಯಾಗಿ ನಡೆಸಲಿಕ್ಕಾಗದ ಜಯಪ್ರಕಾಶರು ಅದರಿಂದ ಬಾಹಿರರಾಗಿ ವಿನೋಬಾ ಭಾವೆಯವರ ಹೇಡಿ 'ದಾನ' ಗಳ ಚಳವಳಿಗೆ ಸೇರಿಕೊಂಡರು. ಭೂದಾನದಿಂದ ಜೀವದಾನದ ಘೋಷಣೆಯನ್ನು ಮಾಡಿದರು. ಆಗಲೂ ಅವರನ್ನು ಜನರಾಗಲಿ, ಆಳುವವರಾಗಲಿ ಗುರುತಿಸಲೇ ಇಲ್ಲ—ನಾಯಕನೆಂದು. ಅನಂತರ ರಾಜಕೀಯ ಸನ್ಯಾಸವನ್ನು ಸ್ವೀಕರಿಸುವುದಾಗಿ ಘೋಷಿಸಿದರು. ಪ್ರತ್ಯಕ್ಷ ರಾಜಕೀಯದಿಂದ ಹೊರಗಿರುವುದಾಗಿ ಹೇಳಿದರು. ಅದರಿಂದ ಏನೂ ಆಗಲಿಲ್ಲ. ನಿಷ್ಕ್ರಿಯತೆಗೆ ದೊರೆಯಬೇಕಾದ ಫಲವೇ ಅವರಿಗೆ ದೊರೆಯಿತು. ಈಗ ಪಾಶ್ಚಿಮಾತ್ಯ ದೇಶಗಳಲ್ಲಿ ಸುತ್ತಾಡುತ್ತ ಭಾರತಕ್ಕೆ ಗಂಡಾಂತರ ಬಂದರೆ ಪ್ರಧಾನಿಯಾಗಲು ಸಿದ್ಧ ಎಂದು ಹೇಳುವುದನ್ನು ಕಂಡರೆ ಅವರು ತಮ್ಮ ರಾಜಕೀಯ ಜೀವನದ ಸೋಲಿನ ಕಾರ್ಗತ್ತಲೆಯಲ್ಲಿ ಎಡವುತ್ತ ಕಿರಿಚುತ್ತಿದ್ದಾರೆಂದು ಸ್ಪಷ್ಟವಾಗುತ್ತದೆ. ಅವರಿಗೆ ಬೇಕಾಗಿರುವುದು ಮುಖ್ಯಮಂತ್ರಿಪದ ಮಾತ್ರ ಎಂದು ಕಾಣುತ್ತದೆ. ಅದೂ ಅನಾಯಾಸವಾಗಿ ಬರಬೇಕು. ಜನರೇ ವಹಿಸಿ ಕೊಡಬೇಕು !

ಅವರು "ಗಾಯಗೊಂಡ ಸತ್ವಶಾಲಿ" ಎಂದು ಗಾರ್ಡಿಯನ್ ಪತ್ರಿಕೆ ಬರೆದಿದೆಯಂತೆ. ಅವರು ಗಾಯಗೊಂಡಿರುವುದೇನೋ ನಿಜವೇ. ಆದರೆ ಸತ್ವಶಾಲಿ ಎಂದು ಹೇಗೆ ಹೇಳುವುದು ? ಅವರು ನಿಜವಾಗಿಯೂ ಸತ್ವಶಾಲಿಗಳೇ ಆಗಿದ್ದರೆ ಇಂದಿನ ಆಡಳಿತ ಪಕ್ಷ ಸೋಲುಗಳಿಂದ ಕೂಡಿದೆ, ಅದರಿಂದ ಕಾರ್ಯಗಳಾವು ಎಂದು ಭಾವಿಸುವುದಾಗಿದ್ದರೆ ಅದಕ್ಕೆ ಪ್ರತಿಯಾಗಿ ಸುಸಜ್ಜಿತ ಎಡಪಕ್ಷವನ್ನು ಕಟ್ಟುತ್ತಿದ್ದರು, ಇಲ್ಲವೇ ಎಡಪಕ್ಷಗಳ ಸಂಘಟನೆಯಲ್ಲಿ ತೊಡಗುತ್ತಿದ್ದರು. ದೇಶದ ಬಗ್ಗೆ ಅನಾಯಾಸ ಕ್ಷೇಮದ ಭಾವನೆಯನ್ನಾಗಲಿ, ತಮ್ಮ ರಾಜಕೀಯ ಜೀವನದಲ್ಲಿ ರಾಜೀ ಮನೋಭಾವನೆಯನ್ನಾಗಲಿ ಎಂದಿಗೂ ಅವರು ತೋರಿಸುತ್ತಿರಲಿಲ್ಲ.

ಸೋಷಲಿಸ್ಟರನ್ನು ಕನ್ನಡದ ಹೆಸರಾಂತ ಕಾದಂಬರಿಕಾರರೊಬ್ಬರು ಮಾರ್ಕ್ಸ್‌ವಾದದ ಸೀರೆಯನ್ನುಟ್ಟ ಬೃಹನ್ನಳೆಗಳು ಎಂದು ಕರೆದಿದ್ದಾರೆ. ಆ ಸೀರೆ ಕಳಚಿದಾಗ ಇನ್ನೇನು ತಾನೆ ಕಂಡೀತು ?

ಈ ಮಾತು ನಮ್ಮ ಅನೇಕ ಜನ ಸೋಷಲಿಸ್ಟರಿಗೆ ಅನ್ವಯಿಸುತ್ತದೆ.

ಜಯಪ್ರಕಾಶರಿಗೆ ಅಧಿಕಾರ ವ್ಯಾಮೋಹವಿರುವುದು ಪ್ರಕಟವಾಗುತ್ತಿರುವುದು ಇದೇ ಮೊದಲ ಸಲವಲ್ಲ. ಆ ಭಾವನೆ ಅವರಲ್ಲಿ ಆಗಾಗ ಹೆಡೆಯೆತ್ತುತ್ತಲೇ ಇರುತ್ತದೆ.

ಹೆಸರು ಜಯಪ್ರಕಾಶ ಎಂದಿದ್ದರೂ ಅವರು ಅಪಜಯದ ಕಾರ್ಗತ್ತಲಲ್ಲಿ ತಡವರಿಸುತ್ತಿರುವುದನ್ನು ಹಿಂದೆಯೂ ಅವರ ಭಾಷಣಗಳಿಂದ ಕಂಡಿದ್ದೇವೆ. ಈಗಲೂ ಕಾಣುತ್ತಿರುವೆವು, ಮುಂದೆಯೂ ಕಾಣುತ್ತೇವೆ.

ಎಂ. ಕೆ. ರಾಮಚಂದ್ರ, ಬೆಂಗಳೂರು.

ಕಾರ್ಮಿಕ ಶಾಸನದ ಪ್ರಯೋಜನ ನಮಗಿಲ್ಲ !

ಸುಮಾರು ಹನ್ನೆರಡು ಸಾವಿರಕ್ಕೂ ಮೀರಿ ಪ್ರಜಾಸಂಖ್ಯೆ ಇರುವ ಮುಳಬಾಗಿಲು ಟವನ್ನಿನಲ್ಲಿ ಅನೇಕ ಹೋಟೆಲುಗಳೂ, ಮಿಲ್ಲುಗಳೂ, ಎರಡು ವರ್ಕ್‌ಷಾಪುಗಳೂ, ಮತ್ತು ಜವಳಿ ಹಾಗೂ ಇನ್ನಿತರ ಮಂಡಿಗಳೂ ಇವೆ. ಆದರೆ ಇಲ್ಲಿಯ ಕಾರ್ಮಿಕರಿಗೆ ವಾರದಲ್ಲಿ ಒಂದು ದಿನ ಕೂಡ ರಜಾ ದೊರೆಯುತ್ತಿಲ್ಲ ವಾರವೆಲ್ಲ ದುಡಿಯುವುದೇ ಇಲ್ಲಿಯ ಕಾರ್ಮಿಕರ ಹಣೆಬರೆಹವಾಗಿದೆ. ಕಾರ್ಮಿಕರಿಗಾಗಿ ಶಾಸನವನ್ನು ನಮ್ಮ ಘನ ಸರ್ಕಾರದವರು ಜಾರಿಯಲ್ಲಿ ತಂದಿದ್ದರೂ ಅದು ನಮ್ಮ ಪಾಲಿಗೆ ಮಾತ್ರ ಇಲ್ಲದಂತಾಗಿದೆ. ಲೇಬರ್ ಕಮಿಷನರ್‌ರವರು ಈ ಕಡೆಗೆ ಗಮನ ಕೊಟ್ಟು ನಮಗೂ ವಾರದಲ್ಲಿ ಒಂದು ದಿನ ರಜೆ ಕಡ್ಡಾಯವಾಗಿ ದೊರೆಯುವಂತೆ ಮಾಡುವರೆ ?

ಓರ್ವ ಕಾರ್ಮಿಕ, ಮುಳುಬಾಗಿಲು

ಮಧುಗಿರಿ ಹಿಂದುಳಿದವರ ಹಾಸ್ಟೆಲುಗಳಲ್ಲಿ ತಿಮಿಂಗಲು, ಮತ್ತು ತೋಳಗಳ ಹಾವಳಿ

ಮಧುಗಿರಿಯಲ್ಲಿ ನಿಮ್ನ ವರ್ಗದ ವಿದ್ಯಾರ್ಥಿ ನಿಲಯಗಳು ಮೂರು ಇವೆ. ಆದಿ ದ್ರಾವಿಡ, ಲಂಬಾಣಿ ಮತ್ತು ಆದಿ ಕರ್ಣಾಟಕರದು. ಈ ರೀತಿಯಿರಬಹುದೆ? ಇದುವರೆವಿಗೂ ಆದಿ ಕರ್ಣಾಟಕರ ಹಾಸ್ಟಲು ಕಮಿಟಿಯ ಅಧ್ಯಕ್ಷರಾಗಿದ್ದ ಶ್ರೀ ಮಾಲಿ ಮರಿಯಪ್ಪನವರು ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸಲಿಲ್ಲ. ಇದರ ಲೆಕ್ಕಪತ್ರಗಳು ಸರಿಯಾಗಿಲ್ಲದಿರುವುದರ ಬಗ್ಗೆ ಆಡಿಟ್ ಆಫೀಸರ್‌ರವರು ಸಹ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಶ್ರೀ ಚನ್ನಿಗರಾಮಯ್ಯನವರ ಬಂಧುಗಳೊಬ್ಬರು ಹಾಸ್ಟಲಿನ ಗ್ರಾಂಟಿನಲ್ಲಿ ಸುಮಾರು 600 ರೂಗಳನ್ನು ಕದ್ದುಕೊಂಡು ಹೋಗಿರುವುದರ ಬಗ್ಗೆ ಶ್ರೀ ಮಾಲಿ ಮರಿಯಪ್ಪನವರು ಸರಿಯಾದ ತನಿಖೆ ನಡೆಸದೆ ಮುಚ್ಚಿಟ್ಟಿದ್ದರು. ಹಾಸ್ಟಲಿನ ವಿದ್ಯಾರ್ಥಿಗಳು ಎಷ್ಟೋ ಸಲ ಸಂಬಂಧಪಟ್ಟವರಲ್ಲಿ ತಮ್ಮ ಕುಂದು ಕೊರತೆಗಳ ಬಗ್ಗೆ ಅರಿಕೆ ಮಾಡಿದ್ದರೂ ಪ್ರಯೋಜನವಾಗಲಿಲ್ಲ. ಶ್ರೀ ಮಾಲಿ ಮರಿಯಪ್ಪನವರು ತಮಗೆ ಬೇಕಾದವರನ್ನೆ ಕಮಿಟಿಯ ಸದಸ್ಯರನ್ನಾಗಿರಿಸಿಕೊಂಡಿರುವುದು ಹಾಸ್ಟಲಿನ ಅಭಿವೃದ್ಧಿಗೆ ಧಕ್ಕೆಯುಂಟಾಗಿದೆ. ಕೊರಟಗೆರೆ ತಿಮಿಂಗಲ ಮಾನುಗಳನ್ನು ನುಂಗಿದ್ದು ಸ್ಪಷ್ಟವಾಯಿತು. ಮಧುಗಿರಿಯ ತೋಳ ಎಷ್ಟು ಕುರಿಗಳನ್ನು ಕಚ್ಚುತ್ತದೆ ? ಜನತೆಯು ಎಚ್ಚೆತ್ತು ನೋಡುವುದೇ ?

ಇನ್ನು ಮೇಲಾದರೂ ಹಾಸ್ಟಲು ವಿದ್ಯಾರ್ಥಿಗಳಿಗೆ ನ್ಯಾಯವಾದ ವ್ಯವಸ್ಥೆಯಿಂದ ಸರಿಯಾದ ಸೌಕರ್ಯವನ್ನುಂಟು ಮಾಡಲು ಪ್ರಯತ್ನಿಸುವರೇ ? 600 ರೂ. ಕದ್ದ ಕಳ್ಳನನ್ನು ಹಿಡಿಯಲು ಸಂಬಂಧಪಟ್ಟ ಅಧಿಕಾರಿಗಳು ಪ್ರಯತ್ನಿಸುವರೆ ?

ಪಿ. ನಾರಾಯಣ ರೆಡ್ಡಿ
ಮಧುಗಿರಿ

8 ಮನೆಗಳು, 34 ಜನ ಪೋಲೀಸರು !

ನಮ್ಮ ಮೈಸೂರು ರಾಜ್ಯದಲ್ಲಿ ಪೋಲೀಸ್ ಕಾನ್ಸ್ಟೇಬಲ್‌ಗಳ ಬಗ್ಗೆ ಸರ್ಕಾರದ ದೃಷ್ಟಿ ಹರಿಯಬೇಕು. ಅವರು ಕರ್ತವ್ಯನಿಷ್ಠರಾಗುವುದರಲ್ಲಿ ಅಸಮರ್ಪಕವಾದ ಆರ್ಥಿಕ (ಅದರಿಂದ ಮಾನಸಿಕ) ತೊಂದರೆಯುಂಟಾಗುವುದು ತಪ್ಪಬೇಕು. ಇದು ಹೆಚ್ಚಾಗಿ ಕಾಣುವುದು ಅವರಿಗೆ ನಿವಾಸಗಳ ತೊಂದರೆಯಲ್ಲಿ. ಇದು ಬಹುಶಃ ಸಂಸ್ಥಾನದ ಎಲ್ಲ ಕಡೆಯೂ ನಮ್ಮ ಕುಣಿಗಲಿನಲ್ಲಿರುವಂತೆಯೇ ಇರುವುದಾಗಿರಬೇಕು, ಕುಣಿಗಲಿನಲ್ಲಿ ಪೋಲೀಸ್ ಲೈನ್ ಮನೆಗಳಿವೆ. ಆದರೆ ಮನೆ ಗಳಿರುವುದು ಎಂಟು, ಪೋಲೀಸಿನವರ ಸಂಖ್ಯೆ ಇರುವುದು ಮೂವತ್ತಕ್ಕೆ ಮೇಲ್ಪಟ್ಟು ಲೈನ್ ಮನೆಗಳಲ್ಲಿ ವಾಸಿಸುವ ಎಂಟು ಜನಕ್ಕೆ ಮನೆ ಬಾಡಿಗೆ ಉಳಿಯುತ್ತದೆ. ಉಳಿದ ಇಪ್ಪತ್ತನಾಲ್ಕು ಜನಗಳಿಗೆ ಮನೆ ಬಾಡಿಗೆ ಬಾಬ್ತು ಅವರ ಸಂಬಳದಲ್ಲಿ ತಿಂಗಳು ಒಂದಕ್ಕೆ 7 ರೂನಿಂದ 8 ರೂಗಳವರೆಗೆ ಖೋತಾ ಬೀಳುತ್ತಿದೆ. ಅಥವಾ ದಿನ ಒಂದಕ್ಕೆ ಬಾಡಿಗೆ ಮನೆಯವರು ಲೈನ್ ಮನೆಗಳಲ್ಲಿರುವವರಿಗಿಂತ ನಾಲ್ಕಾಣೆ ಕಡಿಮೆ ಕೂಲಿಗೆ ಅಷ್ಟೇ ದುಡಿಯಬೇಕಾಗುತ್ತದೆ. ಅಥವಾ ಇನ್ನೂ ಹೆಚ್ಚಿಗೆ ದುಡಿಯಬೇಕಾಗುತ್ತೆ. ಏಕೆಂದರೆ ಲೈನ್ ಮನೆಗಳು ಯಾವಾಗಲೂ ಸ್ಥಳೀಯ ಅಧಿಕಾರಿಗಳ ಅಪೇಕ್ಷಿತ ಅನಪೇಕ್ಷಿತಗಳಿಗೆ ಒಗ್ಗಿಕೊಂಡಿರುವವರಿಗೆ ಮಾತ್ರ ಸಿಕ್ಕುವುದು ಸ್ವಾಭಾವಿಕ. ಆದ್ದರಿಂದ ಸರ್ಕಾರದವರೂ ಹಾಗೂ ಖಾತೆಯ ಮುಖ್ಯಾಧಿಕಾರಿಗಳೂ ದೊಡ್ಡ ಮನಸ್ಸು ಮಾಡಿ ಮನೆಗಳಿಲ್ಲದವರಿಗೆ ಮನೆ ಬಾಡಿಗೆ ಅಲೋಯನ್ಸ್‌ನ್ನು ಸಾಧಾರಣ ತಿಂಗಳಿಗೆ ಐದು ರೂಪಾಯಿಗಳಷ್ಟನ್ನಾದರೂ ಒದಗಿಸಿಕೊಟ್ಟು ಸರ್ಕಾರದ ನ್ಯಾಯವು ಎಲ್ಲರಿಗೂ ಒಂದೇ ಇರುವುದೆಂಬುದನ್ನು ಅದರಲ್ಲೂ ಬಹು ಮುಖ್ಯವಾಗಿ ಸ್ಥಳದಿಂದ ಸ್ಥಳಕ್ಕೆ ವರ್ಗಾಯಿಸಲ್ಪಡುವ ಕಡಿಮೆ ದರ್ಜೆ ಸಂಬಳದಾರರಾದ ಪೋಲೀಸ್ ಕಾನ್ಸ್ಟೇಬಲ್‌ಗಳಿಗೆ ಅನುಕೂಲ ಒದಗಿಸಿ ಕೊಡುವುದನ್ನು ಗಮನಿಸುವರೆಂದು ನಂಬಿಕೆ.

"ವೀಕ್ಷಕ" ಕುಣಿಗಲ್ಲು

ಜೂನ್ 16 ರಿಂದ ಬೊಂಬಾಯಿಯ ಬಂದರು ಕಾರ್ಮಿಕರ ಮುಷ್ಕರ !

ಬಂದರು ಕೆಲಸಗಾರರ ಬಗ್ಗೆ ಚೌಧುರಿ ವರದಿ ಇತ್ತಿರುವ ಸಲಹೆಗಳನ್ನು ಕೂಡಲೇ ಜಾರಿಗೆ ತಾರದಿದ್ದರೆ ಬೊಂಬಾಯಿಯ ಬಂದರು ಕೆಲಸಗಾರರು ಜೂನ್ ೧೬ರಿಂದ ಮುಷ್ಕರ ಹೂಡುವರೆಂದು ಅಖಿಲ ಭಾರತ ಬಂದರು ಮತ್ತು ಡಾಕ್ ಕಾರ್ಮಿಕರ ಸಂಘದ ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ಎಸ್. ಆರ್. ಕುಲಕರ್ಣಿಯವರು ತಿಳುಹಿಸಿದ್ದಾರೆ.

ಭಾರತದ ಪ್ರಮುಖ ಬಂದರವಾದ ಬೊಂಬಾಯಿಯ ಕಾರ್ಮಿಕರು ಮುಷ್ಕರ ನಡೆಸುವುದು ಒಂದು ದೊಡ್ಡ ಸುದ್ದಿ ಎನ್ನುವದರಲ್ಲಿ ಸಂದೇಹವೇ ಇಲ್ಲ. ಚೌಧರಿ ವರದಿಯಲ್ಲಿ ಹೇಳಿರುವಂತೆ ೩ ಮತ್ತು ೪ನೆಯ ದರ್ಜೆಯ ಕೆಲಸಗಾರರಿಗೆ ವೇತನ ಪ್ರಮಾಣಗಳನ್ನು ತಕ್ಷಣವೇ ಅನ್ವಯಿಸಬೇಕೆಂದೂ ಇಲ್ಲದಿದ್ದರೆ ಮುಷ್ಕರ ನಡೆಯುವದೆಂದೂ ಶ್ರೀ ಕುಲಕರ್ಣಿಯವರು ತಿಳಿಸಿದ್ದಾರೆ.

ಇತ್ತೀಚೆಗೆ ಈ ಸಂಬಂಧವಾಗಿ ನಡೆದ ಮಾತುಕತೆಗಳು ವಿಫಲವಾದ್ದರಿಂದ ಈ ತೀರ್ಮಾನಕ್ಕೆ ಬರಲಾಯಿತೆಂದು ಹೇಳಲಾಗಿದೆ.

ಹೊಟೇಲ್ ಮಜದೂರ್ ಸಭೆಯ ವಾರ್ಷಿಕ ಸಭೆ

(೩ನೇ ಪುಟದಿಂದ)

ನ್ನು ಚುನಾಯಿಸಲಾಯಿತು. ಕಾ॥ ಜಿ. ಎಂ. ಫರೀದ್, ಮುನ್ಸಿಪಲ್ ಕೌನ್ಸಿಲರ್ ಅವರು ಅಧ್ಯಕ್ಷರಾಗಿಯೂ, ಸಿ. ಆರ್. ಫೆರ್ನಾಂಡೀಜ್, ಬೈಜನಾಥ್ ದ್ವಿವೇದಿ, ಮತ್ತು ಮದನ್ ಹೆಗ್ಡೆ ಅವರುಗಳು ಉಪಾಧ್ಯಕ್ಷರುಗಳಾಗಿಯೂ, ಪಿ. ವಿ. ಉಪಾಧ್ಯಾಯರು ಜನರಲ್ ಸೆಕ್ರೆಟರಿಗಳಾಗಿಯೂ, ಎಸ್. ಎಲ್. ಪೂಜಾರಿ ಮತ್ತು ಸದಾಶಿವರಾವ್ ಅವರು ಕಾರ್ಯದರ್ಶಿಗಳಾಯೂ, ಕುಮಾರಿ ಜೆಡ್. ಎ. ಗೋಪಾಲಿನಿ ಅವರು ಖಜಾಂಚಿಗಳಾಗಿಯೂ ಚುನಾಯಿಸಲ್ಪಟ್ಟರು.

ಐದು ನೂರಕ್ಕೂ ಹೆಚ್ಚು ಜನ ಸದಸ್ಯರು ಆಗಮಿಸಿದ್ದರು.

ಅಖಿಲ ಭಾರತ ಹೊಟೇಲ್ ಕೆಲಸಗಾರರ ಸಮ್ಮೇಲನ

ಎರ್ನಾಕುಲಂನಲ್ಲಿ 1957ರಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ಸಿನಲ್ಲಿ ಅಂಗೀಕರಿಸಲ್ಪಟ್ಟ ಅಖಿಲ ಭಾರತ ಹೊಟೇಲ್ ಮಜದೂರ್ ಸಮ್ಮೇಲನವೊಂದನ್ನು ನಡೆಸಬೇಕೆಂಬ ಗೊತ್ತುವಳಿಗೆ ಈ ಸಭೆಯು ಬೆಂಬಲ ನೀಡಿತಲ್ಲದೆ ಮತ್ತು ಎ. ಐ. ಟಿ. ಯು. ಸಿ.ಯ ಸಮ್ಮೇಲನದಲ್ಲಿ ನಿರ್ಣಯಿಸಲ್ಪಟ್ಟಿರುವಂತೆ ಕಾ| ಪಿ. ವಿ. ಉಪಾಧ್ಯಾಯರನ್ನು ಅಖಿಲ ಭಾರತ ಹೊಟೇಲ್ ಮಜದೂರ್ ಸಮ್ಮೇಲನದ ಕನ್ವೀನರನನ್ನಾಗಿಯೂ ಮತ್ತು ಆ ದಿಶೆಯಲ್ಲಿ ಕಾರ್ಯ ಮಾಡುವದಕ್ಕಾಗಿಯೂ ಅಧಿಕಾರ ಕೊಟ್ಟಿತು.

ರೈತ ಸಂಘಟನೆ ವಿಸ್ತರಿಸಿರಿ, ಬಲಪಡಿಸಿರಿ —— ಸದಸ್ಯರನ್ನು ಸೇರಿಸುವ ಕೆಲಸ ಮುಂದೊತ್ತಿರಿ

ಕರ್ನಾಟಕ ಪ್ರಾಂತ ರೈತ ಸಂಘದ ಕರೆ

ಕರ್ನಾಟಕದ ರೈತರು ಬಹಳ ಕಾಲದಿಂದ ನಿರೀಕ್ಷಿಸುತ್ತಿರುವ ಸಮಗ್ರ ಮತ್ತು ಪ್ರಗತಿಶೀಲ ಭೂಸುಧಾರಣೆಯ ಶಾಸನ ಒಂದಲ್ಲವೊಂದು ನೆಪದಿಂದ ಹಿಂದೆ ದೂಡಲ್ಪಡುತ್ತಿದೆ. ಪ್ರಾಂತದ ವಿವಿಧ ಪ್ರದೇಶಗಳ ಪರಿಸ್ಥಿತಿಗಳನ್ನು ಅಭ್ಯಾಸ ಮಾಡಿ ಯೋಗ್ಯ ಸಲಹೆಗಳನ್ನು ಕೊಡಲು ಸಮಿತಿಯೊಂದನ್ನು ನೇಮಿಸಿ, ಅದರ ಹೆಸರಲ್ಲಿ ಕೆಲವು ತಿಂಗಳುಗಳನ್ನು ಕಳೆದ.ದಾಯಿತು. ಸಮಿತಿಯ ವರದಿ ಪ್ರಕಟವಾದ ಬಳಿಕ, ಅದನ್ನು ಶಾಸನ ಸಭೆಯಲ್ಲಿ ಚರ್ಚಿಸುವ ನೆಪದಿಂದ ಮತ್ತೆ ಕೆಲವು ತಿಂಗಳುಗಳನ್ನು ಕಳೆದುದಾಯಿತು. ಅನಂತರ ಮಂತ್ರಿಮಂಡಲದ ಬದಲಾವಣೆಗೆ ಕೆಲವು ತಿಂಗಳುಗಳು, ಬದಲಾವಣೆಯ ಪರಿಣಾಮವಾಗಿ ಕೆಲವು ತಿಂಗಳುಗಳು....ಹೀಗೆ ಕಾಲ ಕಳೆಯುತ್ತಲೇ ಇದೆ. ಕಾಂಗ್ರೆಸ್ ಪಕ್ಷದೊಳಗೆ ಪ್ರತಿಯೊಬ್ಬರೂ ಮಂತ್ರಿಯಾಗುವ ಪ್ರಯತ್ನದಲ್ಲೇ ಮುಳುಗಿ ಜನತೆಯನ್ನು ಮರೆತಿದ್ದಾರೆ. ಸರಕಾರಕ್ಕೆ ತನ್ನ ಅಳಿಗಾಲವನ್ನು ಆದಷ್ಟು ದೂರಮಾಡುವ ಪ್ರಯತ್ನವೇ ಸಾಕು ಸಾಕಾಗಿ ಬೇರೆ ಯಾವ ಕೆಲಸಕ್ಕೂ ಸಮಯ ಸಿಗದಂತಾಗಿದೆ. ಅಂತೂ ಇಂತೂ ಭೂಸುಧಾರಣೆಯ ಶಾಸನ ಈ ತನಕ ಬೆಳಕು ಕಾಣಲಿಲ್ಲ; ಸದ್ಯ ಕಾಣುವ ಲಕ್ಷಣವೂ ಇಲ್ಲ.

ಭೂಸುಧಾರಣೆಯ ಕಡು ವಿರೋಧಿಗಳು, ಜತ್ತಿ ಸಮಿತಿಯ ಸ್ವಾಗತಾರ್ಹ ಶಿಫಾರಸುಗಳನ್ನೆಲ್ಲ ತೀವ್ರವಾಗಿ ಖಂಡಿಸಿದದರು, ಜತ್ತಿಯವರ ಸರಕಾರದಲ್ಲಿ ಮಂತ್ರಿಗಳಾಗಿದ್ದಾರೆ. ಮಸೂದೆ ತಯಾರಿಸುವ ಮೊದಲು ಮೈಸೂರು ಕಾಂಗ್ರೆಸ್ ಸಮಿತಿಯೊಡನೆ ವಿಚಾರ ವಿನಿಮಯ ನಡೆಸುವುದಾಗಿ ಮುಖ್ಯಮಂತ್ರಿ ಜತ್ತಿಯವರು ಹೇಳಿಕೆ ಇತ್ತಿದ್ದಾರೆ. ಮೈಸೂರು ಕಾಗ್ರೆಸ್‌ನ ನಾಯಕತ್ವವು ದೊಡ್ಡ ಭೂಮಾಲಿಕರ ಕೈಯೊಳಗಿದೆ ಎಂದ ಮೇಲೆ, ಈ ವಿಚಾರ ವಿನಿಮಯ ಫಲ ಏನೆಂದು ಊಹಿಸಬಹುದು.

ಪ್ರಾಂತದ ಆದ್ಯಂತ ರೈತರಿಂದ ಹೊಲ ತಪ್ಪಿಸುವ ಹಾವಳಿ ಹಿಂದೆ ಎಂದಿಗಿಂತಲೂ ಈಗ ಹೆಚ್ಚಾಗಿದೆ. ಒಂದೊಂದು ಜಿಲ್ಲೆಯಲ್ಲೂ ಭೂಮಾಲಿಕ—ರೈತ ವಿವಾದಗಳಿಗೆ ಸಂಬಂಧಿಸಿ ಸಾವಿರಾರು ಸಿವಿಲ್ ಮತ್ತು ಕ್ರಿಮಿನಲ್ ಖಟ್ಲೆಗಳು ಕೋರ್ಟುಗಳಲ್ಲಿ ನಡೆಯುತ್ತಿವೆ, ರೈತರು ಅಪಾರ ಕಷ್ಟ—ನಷ್ಟಗಳಿಗೆ ತುತ್ತಾಗಿದ್ದಾರೆ.

ಈ ಸಂದರ್ಭದಲ್ಲಿ ಯೋಗ್ಯ ಭೂಸುಧಾರಣೆಯ ಶಾಸನದ ಸಲುವಾಗಿ ಪ್ರಾಂತದ ಉದ್ದಗಲಕ್ಕೆ ಬಿರುಸಾದ ಚಳುವಳಿ ನಡೆಯಬೇಕು. ಅದರ ಜೊತೆಯಲ್ಲೆ ರೈತರ ಮೇಲೆ ನಡೆಯುವ ಪ್ರತಿಯೊಂದು ಧಾಳಿಯನ್ನೂ ತಡೆಯಲು, ವ್ಯವಹರಣೆಗಳಲ್ಲಿ ನೆರವಾಗಲು, ಸಂಘಟಿತ ಪ್ರಯತ್ನ ಸಾಗಬೇಕು. ರೈತರ ನೂರಾರು ದೈನಂದಿನ ಪ್ರಶ್ನೆಗಳಲ್ಲಿ, ಸರಕಾರದೊಡನೆಯೂ ಅಧಿಕಾರ ವರ್ಗದೊಡನೆಯೂ ನಡೆಸಬೇಕಾಗುವ ಹಲವಾರು ವ್ಯವಹಾರಗಳಲ್ಲಿ, ಸಹಾಯ ನೀಡಬೇಕು. ಇದಕ್ಕೆ ಬಲವಾದ ಮತ್ತು ಚುರುಕಾದ ಸಂಘಟನೆ ಅವಶ್ಯಬೇಕು.

ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಕೆಲವು ವರ್ಷಗಳಿಂದ ರೈತ ಸಂಘಟನೆಗಳು ಹುಟ್ಟಿ ಅನೇಕ ಹೋರಾಟಗಳನ್ನೂ ಚಳುವಳಿಗಳನ್ನೂ ನಡೆಸುತ್ತ ಬಂದಿವೆ. ಅವನ್ನೆಲ್ಲ ಕೇಂದ್ರೀಕರಿಸುವ ಮತ್ತು ಬೆಳೆಸುವ ಉದ್ದೇಶದಿಂದ ಕರ್ನಾಟಕ ರೈತ ಸಂಘ ಹುಟ್ಟಿತು.

ಕರ್ನಾಟಕ ಪ್ರಾಂತ ರೈತ ಸಂಘ ಸ್ಥಾಪನೆ ಆದ ನಂತರ ರೈತ ಚಳುವಳಿ ಹೊಸ ಪ್ರದೇಶಗಳಿಗೆ ಹಬ್ಬಿದೆ. ಹಿಂದೆ ಅನೇಕ ಕಾರಣಗಳಿಂದ ಸ್ಥಗಿತಗೊಂಡಿದ್ದಲ್ಲಿ ತಿರುಗಿ ಹೊಸ ಹುರುಪು ತಲೆದೋರಿದೆ; ರೈತರಲ್ಲಿ ಜಾಗೃತಿ ಬೆಳೆದಿದೆ; ಸಂಘಗಳ ಚಟುವಟಿಕೆ ಹೆಚ್ಚಾಗಿದೆ ಆದರೆ ಸಂಘಟನೆಯ ಕಡೆಗೆ ಗಮನ ಕೊಡುವುದು ಸಾಲದೆಂದು ಹೇಳಬೇಕಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಸುಧಾರಣೆಯ ಶಾಸನದ ಬಗ್ಗೆ ಗ್ರಾಮಾಂತರಗಳಲ್ಲಿ ಸಭೆಗಳು ನಡೆಯುತ್ತಿವೆ. ರೈತ ಸಂಘಕ್ಕೆ ಸದಸ್ಯರನ್ನು ಸೇರಿಸುವ ಕೆಲಸ ಸಾಗುತ್ತಿದೆ. ಈ ವರ್ಷ ಆರುಸಾವಿರ ರೈತರನ್ನು ಸಂಘಕ್ಕೆ ಸದಸ್ಯರನ್ನಾಗಿ ಸೇರಿಸಬೇಕೆಂಬುದು ಜಿಲ್ಲಾ ರೈತ ಸಂಘದ ನಿರ್ಧಾರ. ಜಿಲ್ಲಾ ರೈತ ಸಂಘವು ಗೇಣಿ ಕೋರ್ಟುಗಳಲ್ಲಿ ನೂರಾರು ರೈತರ ದಾವೆಗಳನ್ನು ಸಲ್ಲಿಸಿ ಕಡಿವೆಮಾಡಿಸಲು ಪ್ರಯತ್ನಿಸುತ್ತಿದೆ. ಭೂಮಾಲಕರು ರೈತರ ಮೇಲೆ ಹೂಡಿರುವ ಜಮೀನು ಸ್ವಾಧೀನತೆಯ ಮತ್ತಿತರ ಖಟ್ಲೆಗಳಲ್ಲಿ ರೈತರ ಪರವಾಗಿ ಕೆಲಸಮಾಡುತ್ತಿದೆ.

ಕೊಡಗು ಜಿಲ್ಲೆಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ನಡೆಯುತ್ತಿರುವ ರೈತ ಸಂಘದ ಚಟುವಟಿಕೆಗಳಿಗೆ ಹೊಸ ಹುರುಪು ಹುಟ್ಟಿದೆ. ಜಿಲ್ಲೆಯ ಆದ್ಯಂತ ರೈತ ಚಳುವಳಿಯನ್ನು ವ್ಯಾಪಿಸಿ, ಸಂಘಕ್ಕೆ ಸದಸ್ಯರನ್ನು ಸೇರಿಸಿ ಸಂಘಟನೆಯನ್ನು ಬಲಪಡಿಸುವ ಕೆಲಸ ನಡೆಯುತ್ತಿದೆ. ಮಾರ್ಚ್ ತಿಂಗಳ ಆರಂಭದಲ್ಲಿ ನಡೆದ ಕೊಡಗು ಜಿಲ್ಲಾ ಪ್ರಥಮ ರೈತ ಸಮ್ಮೇಳನವು ಕಾರ್ಯಕರ್ತರಲ್ಲಿ ಹೊಸ ಉತ್ಸಾಹವನ್ನು ಹುಟ್ಟಿಸಿರುವುದಲ್ಲದೆ, ಮುಂದಿನ ಚಟುವಟಿಕೆಗಳ ಬಗ್ಗೆ ಹೊಸ ಕಾರ್ಯಕ್ರಮವನ್ನು ನಿರ್ಣಯಿಸಿದೆ.

ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಕೆಲವು ಕೇಂದ್ರಗಳಲ್ಲಿ ರೈತ ಸಂಘಟನೆಯ ಕೆಲಸ ಆರಂಭವಾಗಿದೆ ಕೆಲವು ಗ್ರಾಮಗಳಲ್ಲಿ ರೈತರಿಂದ ಭೂಮಾಲಿಕರು ಹೊಲ ಕಸಿದುಕೊಳ್ಳಲು ಮಾಡಿರುವ ಪ್ರಯತ್ನಗಳನ್ನು ರೈತರ ಸಾಮೂಹಿಕ ಶಕ್ತಿಯಿಂದ ವಿಫಲಗೊಳಿಸಲು ಸಾಧ್ಯವಾಗಿದೆ. ಭೂಮಾಲಿಕರ ಮತ್ತು ಸರಕಾರದ ದಬ್ಬಾಳಿಕೆಯನ್ನು ಇದಿರಿಸಿ ರೈತ ಸಂಘಟನೆ ಮುನ್ನಡೆಯುತ್ತಿದೆ.

ತುಮುಕೂರು ಜಿಲ್ಲೆಯ ಐದು ತಾಲೂಕುಗಳಲ್ಲಿ, ಶಿವಮೊಗ್ಗ ಜಿಲ್ಲೆಯ ಅನೇಕ ಕೇಂದ್ರಗಳಲ್ಲಿ, ಬಳ್ಳಾರಿ, ಬೆಂಗಳೂರು ಜಿಲ್ಲೆಯ ಉತ್ತರ, ದಕ್ಷಿಣ, ಆನೇಕಲ್ ಮತ್ತು ದೊಡ್ಡಬಳ್ಳಾಪುರ ತಾಲೂಕುಗಳಲ್ಲಿ ರೈತ ಸಂಘಟನೆಯ ಹುಟ್ಟು ಮೆಲ್ಲಗಾದರೂ ಸ್ಥಿರವಾಗಿ ಬೆಳೆಯುತ್ತಿದೆ.

ಗುಲ್ಬರ್ಗ ಜಿಲ್ಲೆಯಲ್ಲಿ ಭೂಸುಧಾರಣೆಯ ಬಗ್ಗೆ ಚಳುವಳಿ ನಡೆಸುವುದರ ಜೊತೆಯಲ್ಲಿ ಗತ ವರ್ಷಗಳ ಅಮಾನತು ಕಂದಾಯವನ್ನು ಬಲಾತ್ಕಾರವಾಗಿ ವಸೂಲು ಮಾಡುವುದನ್ನು ವಿರೋಧಿಸಿ ಚಳುವಳಿ ನಡೆಯುತ್ತಿದೆ. ರೈತ ಸಂಘಕ್ಕೆ ಸದಸ್ಯರನ್ನು ಸೇರಿಸುವ ಕೆಲಸ ಸಾಗುತ್ತಿದೆ.

ಕೋಲಾರ ಮತ್ತು ಕಾರವಾರ ಜಿಲ್ಲೆಗಳಲ್ಲಿ ರೈತ ಸಂಘಟನೆಯನ್ನು ಪುನರುಜ್ಜೀವನಗೊಳಿಸಲು ಪ್ರಯತ್ನ ನಡೆದಿದೆ. ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ರೈತ ಸಂಘಕ್ಕೆ ಸದಸ್ಯರನ್ನು ಸೇರಿಸುವ ಕೆಲಸ ಆರಂಭವಾಗಿದೆ.

ಒಟ್ಟನಲ್ಲಿ ಹೇಳುವುದಿದ್ದರೆ ಕರ್ನಾಟಕದ ಆದ್ಯಂತವಾಗಿ, ಹೆಚ್ಚು ಕಡಿಮೆ ಎಲ್ಲ ಜಿಲ್ಲೆಗಳಲ್ಲೂ, ಕರ್ನಾಟಕ ಪ್ರಾಂತ ರೈತ ಸಂಘದ ಶಾಖೆಗಳು ಹುಟ್ಟಿ ರೈತ ಚಳುವಳಿ ಮತ್ತು ಸಂಘಟನೆ ಹಬ್ಬಿ ಬೆಳೆಯುತ್ತಿರುವುದು ಕಂಡುಬರುತ್ತದೆ.

ಆದರೆ ಆತ್ಮಸಂತೃಪ್ತಿಗೆ ಅವಕಾಶವಿಲ್ಲ. ಅಲಕ್ಷ್ಯ ಮತ್ತು ಕಾಲಹರಣೆಗೆ ಅಸ್ಪದವಿಲ್ಲ. ಪ್ರಜಾಪ್ರಭುತ್ವ ಚಳುವಳಿಯು ಭವಿಷ್ಯ ರೈತ ಸಂಘಟನೆಯನ್ನು ಹೊಂದಿಕೊಂಡಿದೆ. ಭೂಮಾಲಕರ ವರ್ಚಸ್ಸಿಗೆ ಒಳಗಾದ ಸರಕಾರ ಮತ್ತು ಆಡಳಿತ ಯಂತ್ರದ ಆಶ್ರಯದಲ್ಲಿ ರೈತರ ಮೇಲೆ ನಡೆಯುತ್ತಿರುವ ಶೋಷಣೆ—ದಬ್ಬಾಳಿಕೆಗಳನ್ನು ಯಶಸ್ವಿಯಾಗಿ ಪ್ರತಿಭಟಿಸಿ ರೈತರ ಹಿತಗಳನ್ನು ರಕ್ಷಿಸಲು, ಬೇಡಿಕೆಗಳನ್ನು ಸಾಧಿಸಲು, ಪ್ರಬಲವಾದ ಮತ್ತು ವಿಸ್ತಾರವಾದ ರೈತ ಸಂಘಟನೆ ಅವಶ್ಯವಿದೆ.

ಆದುದರಿಂದ ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಎಲ್ಲ ಜಿಲ್ಲೆಗಳಲ್ಲೂ ಸಾವಿರಗಟ್ಟಲೆ ರೈತರನ್ನು ಸದಸ್ಯರನ್ನಾಗಿ ಸೇರಿಸುವ ಕೆಲಸವನ್ನು ಮುನ್ನಡೆಸಿರಿ; ಜಿಲ್ಲಾ, ತಾಲೂಕು ಮತ್ತು ಗ್ರಾಮ ರೈತ ಸಂಘಗಳನ್ನು ರಚಿಸುವ ಮತ್ತು ಅವುಗಳ ಮೂಲಕ ಭೂಸುಧಾರಣೆಗೋಸ್ಕರ ಚಳುವಳಿಯನ್ನೂ ಸ್ಥಳೀಯ ಹಾಗೂ ವೈಯಕ್ತಿಕ ರೈತರ ಸಮಸ್ಯೆಗಳ ನಿವಾರಣೆಗೆ ನಿರಂತರ ಪರಿಶ್ರಮವನ್ನೂ ಮುನ್ನಡೆಸಿರಿ.

ಮಲ್ಪೆ ಪಂಚಾಯತ್ ಚುನಾವಣೆ

ರೈತ ಸಂಘದವರ ಆಯ್ಕೆ

ಇದೇ ತಾ. 4—6—1958ರಂದು ಮಲ್ಪೆ ಪಂಚಾಯತ್ ಬೋರ್ಡ್ ಚುನಾವಣೆ ಜರಗಿ, ಅಧ್ಯಕ್ಷ ಸ್ಥಾನಕ್ಕೆ ಶ್ರೀ ಮಧ್ವರಾಜ್‌ರವರು ಅವಿರೋಧವಾಗಿ ಆಯ್ಕೆಯಾಗಿದ್ದರು. ಅಲ್ಲದೆ 11 ಮಂದಿ ಪಂಚಾಯತ್ ಬೋರ್ಡ್ ಸದಸ್ಯರಲ್ಲಿ 6 ಮಂದಿಯೂ ಸ್ಪರ್ಧೆಯಿಲ್ಲದೆ ಚುನಾಯಿತರಾಗಿದ್ದಾರೆ. ಕಾದಿಟ್ಟ ಸ್ಥಾನಕ್ಕೆ ಯಾರೂ ನಾಮಪತ್ರ ಸಲ್ಲಿಸದಿದ್ದುದರಿಂದ ಚುನಾವಣೆ ನಡೆಯಲಿಲ್ಲ. ಮೂಡುಬೆಟ್ಟು ಮತ್ತು ಕೊಡವೂರು ಬ್ಲಾಕಿನ 4 ಸ್ಥಾನಗಳಿಗೆ ಮಾತ್ರ ಸ್ಪರ್ಧೆ ನಡೆದು ಕೊಡವೂರು ಗ್ರಾಮರೈತ ಸಂಘದ ಅಧ್ಯಕ್ಷರಾದ ಶ್ರೀ ಸುಂದರ ಪೂಜಾರಿಯವರು ಹಾಗೂ ಮೂರ್ತೆದಾರರ ಬೆಲ್ಲದ ಸೊಸೈಟಿಯ ಕಾರ್ಯದರ್ಶಿ ಶ್ರೀ ಸೂರಪ್ಪ ಪೂಜಾರಿಯವರು ಬಹುಮತದಿಂದ ಚುನಾಯಿತರಾಗಿದ್ದಾರೆ. ಮೂಡುಬೆಟ್ಟನಲ್ಲಿ ಸ್ವತಂತ್ರರಿಬ್ಬರು ಆರಿಸಲ್ಪಟ್ಟಿದ್ದಾರೆ.

ಕಾಂಗ್ರೆಸ್ ಕತೆ—

ರಹಸ್ಯದಲ್ಲಿ ಸೋಲೊಪ್ಪಿಗೆ !

ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ಧೇಬಾರ್ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳಿಗೆಲ್ಲ ಸುಮಾರು ಎಂಟು ಪುಟಗಳ ಕಾಗದವನ್ನು ಇತ್ತೀಚೆಗೆ ಕಳುಹಿಸಿಕೊಟ್ಟರು. ಅದರಲ್ಲಿಯ ಹಲವು ವಾಕ್ಯಗಳು ಕಾಂಗ್ರೆಸಿನ ಸ್ವರೂಪದರ್ಶನ ಮಾಡಿಕೊಟ್ಟವೆ. ನೋಡಿ—

"ಪ್ರಧಾನಿ ನೆಹ್ರೂರವರು ತಾತ್ಕಾಲಿಕ ನಿವೃತ್ತಿಗೆ ಹೋಗುವ ವಿಚಾರವನ್ನು ವ್ಯಕ್ತಪಡಿಸಿದ ಕೂಡಲೇ ಏಕಕಾಲಕ್ಕೇ ಪಂಜಾಬ್ ಮೈಸೂರು, ಓರಿಸ್ಸಾ ಮತ್ತು ದೆಹಲಿಗಳಲ್ಲಿ ಕಚ್ಚಾಟಗಳಾರಂಭವಾದವು. ಈ ಕಚ್ಚಾಟಗಳು ಎಂಥ ನಿದ್ರಿತ ಮನುಷ್ಯನನ್ನೂ ಎಚ್ಚರಿಸಲು ಸಾಕಾಗಿದ್ದವು".

"ಹತ್ತು ವರುಷಗಳಿಂದ ನಾವು ನಾಗರಿಕನನ್ನು ನಿರ್ಲಕ್ಷಿಸಿದ್ದೇವೆ. ನಾಗರಿಕನೆಂದರೆ ಒಬ್ಬ ವ್ಯಕ್ತಿಯೆಂದಲ್ಲ, ರಾಜಕೀಯ ದೃಷ್ಟಿಯಿಂದ ಕೇಂದ್ರ ಬಿಂದುವಿನ ನಿರ್ಲಕ್ಷ್ಯತೆ, ನಾವು ಶಕ್ತಿ ಸಂಪಾದಿಸುವ ಮೂಲದ ನಿರ್ಲಕ್ಷ್ಯತೆ."

"ಕಮ್ಯೂನಿಸ್ಟರು ಎಂದೆಂದಿಗೂ ವಿಜಯಿಗಳೇ ಆಗತೊಡಗಿದರೆ ಅದು ಅವರ ಶ್ರೇಷ್ಠ ನೀತಿ ಅಥವಾ ಶ್ರೇಷ್ಠ ಯೋಜನೆ ಅಥವಾ ಶ್ರೇಷ್ಠ ಆಡಳಿತದಿಂದಲ್ಲ. ಈ ಯಾವ ವಿಭಾಗದಲ್ಲಾದರೂ ಕಮ್ಯೂನಿಸ್ಟರು ಚೆನ್ನಾಗಿ ಮಾಡಬಲ್ಲರು ಎಂಬುದನ್ನು ಕೇರಳವು ತೋರಿಸಿಕೊಟ್ಟಿದೆ. ಆದರೆ ಅವರ ದೃಢ ನಿಷ್ಠೆಯ ಮೇಲೆ ನಿಂತಿರುವ ಶ್ರೇಷ್ಠ ಸಂಘಟನೆಯೇ ಕಾರಣ. ಅಳದ ತಳದಿಂದಲೇ ಅವರು ಸಂಘಟನೆಯನ್ನು ಕಟ್ಟಿದ್ದಾರೆ.

—ಪಿ.ಟಿ.ಐ.

ಜಯಪ್ರಕಾಶರ ಬಯಕೆ

(೨ನೇ ಪುಟದಿಂದ)

ಕೀಯವನ್ನು ನೋಡುತ್ತಿರುವವರಿಗೆ, ಅವರಿಂದ ದೇಶಕ್ಕೆ ಎಂಥ ನಾಯಕತ್ವ ದೊರಕೀತು. ಎಂಬುದು ತಿಳಿದಿದೆ.

ಜಯಪ್ರಕಾಶರು ಈ ಹೇಳಿಕೆಯಿಂದ ಅಧಿಕಾರಕ್ಕಾಗಿ ತಮ್ಮ ಬಯಕೆಯನ್ನು ತೋಡಿಕೊಂಡಿದ್ದಾರೆಯೋ ಎಂದು ಯೋಚಿಸಬೇಕಾದ ವಿಷಯವೇ, ವಿಶೇಷ ಪರಿಸ್ಥಿತಿಯಲ್ಲಿ ದೇಶದ ನಾಯಕತ್ವವನ್ನು ಹೊರಲು ತಮ್ಮನ್ನು ಹೊರತು ಭಾರತದಲ್ಲಿ ಮತ್ತಾರೂ ಇಲ್ಲ ಎಂದು ಅವರು ಭಾವಿಸಿದಂತಿದೆಯೋ ?! ತಮ್ಮ ಅಭಿಪ್ರಾಯಗಳನ್ನೇ ದೃಢವಾಗಿಟ್ಟುಕೊಳ್ಳಲಾಗದ ಜಯಪ್ರಕಾಶರು ದೇಶದ ನಾಯಕತ್ವ ಹೇಗೆ ನಿರ್ವಹಿಸಿಯಾರು?

ಕಮ್ಯೂನಿಸ್ಟ್ ಪಾರ್ಟಿ ಕರ್ನಾಟಕ ಪ್ರಾಂತ ಸಮಿತಿಯ ಸಭೆ

(ಮೊದಲನೇ ಪುಟದಿಂದ)

ರಿಂದಲೂ ಜನಪ್ರಿಯ ಕಾರ್ಯಗಳನ್ನು ನೆರವೇರಿಸುವುದರಿಂದಲೂ ಸ್ಥಿರವಾದ ಸರಕಾರವನ್ನೊದಗಿಸಿದೆ. ಮೈಸೂರು ಪ್ರಾಂತ್ಯದಲ್ಲಿ ಕಾಂಗ್ರೆಸ್ ಬಹುಮತ ಗಳಿಸಿದರೆ ಸ್ಥಿರವಾದ ಸರಕಾರವನ್ನೊದಗಿಸುವುದೆಂದು ಕಾಂಗ್ರೆಸ್ ನಾಯಕರು ಚುನಾವಣೆ ಕಾಲದಲ್ಲಿ ಜಂಭ ಕೊಚ್ಚಿಕೊಳ್ಳುತ್ತಿದುದು ಸುಳ್ಳೆಂದು ಈಗ ಸ್ಪಷ್ಟವಾಗಿದೆ ಕಾಂಗ್ರೆಸ್ ಪಕ್ಷದ ದಿವಾಳಿಕೋರತನ ಬಯಲಾಗಿದೆ.

ಮೈಸೂರಿನ ಅಭಿವೃದ್ಧಿಗೆ ಸಾಕಷ್ಟು ಆರ್ಥಿಕ ನೆರವನ್ನು ಕೇಂದ್ರದಿಂದ ಪಡೆಯಲು ಸರಕಾರಕ್ಕೆ ಸಾಧ್ಯವಾಗಿಲ್ಲ. ಯೋಜನೆಗೆ ಮೀಸಲಾಗಿಟ್ಟ ಹಣವನ್ನು ಸಹ ಪೂರ್ತಿಯಾಗಿ ವಿನಿಯೋಗಿಸಲೂ ಪ್ರಾಂತ್ಯ ಸರಕಾರಕ್ಕೆ ಶಕ್ತವಾಗಿಲ್ಲ. ದ್ವಿತೀಯ ಯೋಜನೆಯಲ್ಲಿ ಮೈಸೂರು ರಾಜ್ಯದಲ್ಲಿ ಒಂದೇ ಒಂದು ಮೈಲು ಹೊಸ ರೈಲ್ವೆ ರಚಿಸಲಾಗುವುದಿಲ್ಲ. ಪ್ರಾಂತದ ಅಭಿವೃದ್ಧಿಗೆ ಜೀವಾಧಾರವಾಗಿರುವ ಯೋಜನೆಗಳನ್ನು ಕಡೆಗಣಿಸಲಾಗಿದೆ ಹುಬ್ಬಳ್ಳಿಯ ಕರ್ನಾಟಕ ಟೆಕ್ಸ್‌ಟೈಲ್ಸ್ ಗಿರಣಿಯನ್ನು ಅಲಕ್ಷಿಸಿ ಹಾಳು ಗೆಡವಲಾಗಿದೆ. ಹಲವು ಕೈಗಾರಿಕೆಗಳಿಗೆ ನಮ್ಮಲ್ಲಿ ಅತ್ಯಧಿಕ ಅನುಕೂಲತೆಗಳೂ, ಅವಕಾಶಗಳೂ ಇದ್ದರೂ ಕೂಡ ಸರಕಾರದ ದುರ್ಲಕ್ಷತೆಯಿಂದಾಗಿ ಅವು ಇಲ್ಲಿ ಸ್ಥಾಪಿಸಲ್ಪಡದೆ ತಪ್ಪಿ ಹೋಗುತ್ತಿವೆ.

ಈಗ ನಮ್ಮಲ್ಲಿ ನಿರುದ್ಯೋಗ ಹೆಚ್ಚುತ್ತಿದೆ; ಬೆಲೆಗಳು ಏರುತ್ತಿದೆ; ಜನತೆಯ ಬಡತನ ಮತ್ತು ಸಂಕಷ್ಟಗಳು ತೀವ್ರವಾಗುತ್ತಿದೆ; ರೈತರನ್ನು ಜಮೀನಿನಿಂದ ಬಿಡಿಸುವುದು ಸಾರ್ವತ್ರಿಕವಾಗಿ ನಡೆದಿದೆ; ಆರ್ಥಿಕ ಮುಗ್ಗಟ್ಟು ತೀವ್ರವಾಗುತ್ತಿದೆ ಈ ಪರಿಸ್ಥಿತಿಯಲ್ಲಿ ಈಗ ನಡೆದಿರುವ ಘಟನೆಗಳಿಂದ ಬಿಕ್ಕಟ್ಟು ಇನ್ನು ತೀವ್ರವಾಗುವುದೆಂದು ಕಮ್ಯೂನಿಸ್ಟ್ ಪಾರ್ಟಿಯು ಅಭಿಪ್ರಾಯಪಡುತ್ತದೆ.

ಈಗ ಜನತೆಯಲ್ಲಿ ಅತೃಪ್ತಿ ಬೆಳೆಯುತ್ತಿದೆ. ಕಾಂಗ್ರೆಸ್ಸಿನಲ್ಲಿದ್ದ ಭ್ರಮೆ ದೂರವಾಗುತ್ತಿದೆ. ಸಾಮೂಹಿಕ ಸಂಘಟನೆ ಮತ್ತು ಚಳುವಳಿ ಹರಡುತ್ತಿದೆ. ಈಗಿನ ಘಟನೆಗಳಿಂದ ಬೇಸತ್ತು ಅನೇಕ ನಿಷ್ಠಾವಂತ ಕಾಂಗ್ರೆಸ್ಸಿಗರೂ, ಇತರರೂ ಸಾಮೂಹಿಕ ಸಂಘಟನೆಗಳಲ್ಲಿ ದುಡಿಯಲು ಮುಂದೆ ಬರುತ್ತಿದ್ದಾರೆ; ಕಮ್ಯೂನಿಸ್ಟ್ ಪಾರ್ಟಿಯ ಧೋರಣೆಯಲ್ಲಿ ಆಸಕ್ತಿ ವಹಿಸುತ್ತಿದ್ದಾರೆ; ಅದನ್ನು ಬಲಗೊಳಿಸಲು ಬೆಂಬಲ ನೀಡುತ್ತಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಯು ಇದನ್ನು ಸ್ವಾಗತಿಸುವುದಲ್ಲದೆ ಜನತೆಯ ಹಿತರಕ್ಷಿಸುವುದಕ್ಕೂ ಪ್ರಬಲವಾದ ಸಾಮೂಹಿಕ ಸಂಘಟನೆಯನ್ನು ಕಟ್ಟುವುದಕ್ಕೂ, ಬಲವಾದ ಮತ್ತು ಸಮೃದ್ಧವಾದ ರಾಜ್ಯ ನಿರ್ಮಾಣಕ್ಕೂ ಎಲ್ಲ ನಿಷ್ಠಾವಂತ ಪ್ರಾಮಾಣಿಕ ಕಾಂಗ್ರೆಸ್ಸಿಗರೂ ಇತರ ಪ್ರಜಾಪ್ರಭುತ್ವವಾದಿ ಮತ್ತು ಸಮಾಜವಾದಿ ಶಕ್ತಿಗಳು ಒಂದುಗೂಡಿ ವಿಶಾಲವಾದ ಐಕ್ಯರಂಗವನ್ನು ರಚಿಸಲು ಕಮ್ಯೂನಿಸ್ಟ್ ಪಾರ್ಟಿಯೊಂದಿಗೆ ಸಹಕರಿಸಬೇಕೆಂದು ವಿನಂತಿಸುತ್ತದೆ.

ಪಾರ್ಟಿಯ ಎಲ್ಲ ಸದಸ್ಯನೂ ಕಮ್ಯೂನಿಸ್ಟ್ ಪಾರ್ಟಿಯನ್ನು ಬಲಗೊಳಿಸುವುದಕ್ಕೂ, ಪ್ರಾಂತಾದ್ಯಂತ ಪ್ರಜಾಪ್ರಭುತ್ವ ಚಳುವಳಿಯನ್ನು ಕಟ್ಟುವುದಕ್ಕೂ ಹೆಚ್ಚು ಶ್ರಮ ವಹಿಸಿ ದುಡಿಯಬೇಕೆಂದು ಪ್ರಾಂತ ಸಮಿತಿಯು ಕರೆ ಕೊಡುತ್ತದೆ.

ವಿಮಾನ ಕಾರ್ಖಾನೆ ನೌಕರರ ವಿವಾದ ಪರಿಹಾರದ........

(ಮೊದಲನೇ ಪುಟದಿಂದ)

ಲಿಲ್ಲ. ಜನರಲ್ ಮ್ಯಾನೇಜರ್ ಶ್ರೀನಾಗೇಶ್‌ರವರು ಲೇಬರ್ ಕಮಿಷನರ್‌ರವರಿಂದ ಸಂಘದ ನಿಜವಾದ ಪ್ರತಿನಿಧಿಗಳನ್ನು ಅವರು ಕೆಲಸದಿಂದ ವಜಾ ಆಗಿರುವುದರಿಂದ, ಪ್ರತಿನಿಧಿಸಲು ಹಕ್ಕಿಲ್ಲವೆಂದು, ತಮ್ಮ ಕೈಗೊಂಬೆಗಳ ಮೂಲಕ ಒಪ್ಪಂದ ಮಾಡಿಕೊಳ್ಳಲು ಯತ್ನಿಸಿದರು. ಆದರೆ ಶ್ರೀನಾಗೇಶ್‌ರವರ ಆಟ ನಡೆಯಲಿಲ್ಲ.

ಕೈಗಾರಿಕಾ ಪಂಚಾಯ್ತಿ ಕೋರ್ಟು ವಿವಾದದ ಬಗ್ಗೆ ಪ್ರಾತಿನಿಧ್ಯ ಕುರಿತು, ಕಾನೂನು ರೀತ್ಯ ನಿಜವಾದ ಸಂಘದ ಪ್ರತಿನಿಧಿಗಳನ್ನು ಎತ್ತಿಹಿಡಿದಿತ್ತು. ಅಲ್ಲದೆ ಮ್ಯಾನೇಜ್‌ಮೆಂಟಿನ ವಾದವನ್ನು ಪರಿಶೀಲಿಸಿದಲ್ಲಿ ಅದು ಸಂಘವನ್ನು ಮುರಿಯಲು ದಾರಿ ಮಾಡಿಕೊಟ್ಟಂತಾಗುತ್ತದೆ ಎಂದೂ ತಿಳಿಸಿದ್ದಾರೆ. ನೂತನ ಜನರಲ್ ಮ್ಯಾನೇಜರ್ ಆಗಿರುವ ಶ್ರೀ ಏರ್ ಮಾರ್ಷಲ್ ಇಂಜಿನಿಯರ್‌ರವರು ಸಂಘದ ನಾಯಕರನ್ನು ಕರೆಸಿ ಮಾತುಕತೆ ಸ್ವಲ್ಪ ಮಟ್ಟಿಗೆ ನಡೆಸಿದ್ದಾರೆ. ಅನಂತರದಲ್ಲಿ ತುಟ್ಟಿ ಭತ್ಯದಲ್ಲಿ ಆದೂ ಹೆಚ್ಚಿನ ಬಗ್ಗೆ, ಟ್ರಾನ್ಸ್‌ಪೋರ್ಟ್ ಚಾರ್ಜ್‌ನಲ್ಲಿ ಕಡಿತದ ಬಗ್ಗೆ ಒಪ್ಪಂದವಾಗಿದೆ ಇದು ಸ್ವಾಗತಾರ್ಹವಾದ ವಿಷಯವಾಗಿದೆ. ಓಟಿ ಸ್ಟೇಷನ್ ಅಲೋಯನ್ಸ್ ಬಗ್ಗೆಯೂ ಪ್ರಶ್ನೆ ಇತ್ಯರ್ಥವಾಗಿದೆ. ಮನೆ ಬಾಡಿಗೆ ಭತ್ಯವನ್ನು ಟೆಲಿಫೋನ್ ಕಾರ್ಖಾನೆ ವಿವಾದದ ತೀರ್ಪಿಗೆ ಅನುಸಾರವಾಗಿ ಗೊತ್ತು ಮಾಡಲು ಬಿಡಲಾಗಿದೆ. ಬೋನಸ್ ಪ್ರಶ್ನೆಯ ಬಗ್ಗೆಯೂ ತಾತ್ಕಾಲಿಕವಾಗಿ ಒಪ್ಪಂದವಾಗುವ ನಿರೀಕ್ಷೆ ಇದೆಯೆಂದು ತಿಳಿದುಬಂದಿದೆ. ಏನೇ ಆದರೂ ನೌಕರರಿಗೆ ದೊರೆತಿರುವ ಈ ರಿಯಾಯಿತಿಗಳು ದೊಡ್ಡ ವಿಜಯವಾಗಿದೆಯೆಂದು ಹೇಳಬೇಕು.

ಕೆಲಸದಿಂದ ವಜಾ ಮಾಡಲ್ಪಟ್ಟಿರುವ ನೌಕರರ ಪ್ರಶ್ನೆ ಇನ್ನೂ ಇತ್ಯರ್ಥವಾಗಿಲ್ಲ. ಮ್ಯಾನೇಜ್‌ಮೆಂಟು ಈ ಬಗ್ಗೆ ಇನ್ನೂ ಮೊಂಡು ಧೋರಣೆಯನ್ನನುಸರಿಸುತ್ತಿದ್ದಂತಿದೆ. ಕೈಗಾರಿಕಾ ಪಂಚಾಯ್ತಿಯ ಮುಂದೆ ಕೈಗಾರಿಕಾ ವಿವಾದ ಕಾನೂನು ರೀತ್ಯ ಈ ಬಗ್ಗೆ ವಿವಾದವಿದ್ದರೂ ಸಹ ಮ್ಯಾನೇಜ್‌ಮೆಂಟು ನೇರವಾಗಿ ಸಂಘದ ಪ್ರತಿನಿಧಿಗಳೊಂದಿಗೆ ಒಪ್ಪಂದಕ್ಕೆ ಬರುವುದು ಒಳಿತು. ಆದರೆ ಮ್ಯಾನೇಜ್‌ಮೆಂಟಿನವರು ಕೆಲಸದಿಂದ ಹೊರಹಾಕಿರುವವರಲ್ಲಿ ಕೆಲವರನ್ನು ಹೊಸದಾಗಿ ಕೆಲಸಕ್ಕೆ ನೇಮಿಸಿಕೊಳ್ಳುವುದಾಗಿಯೂ, ಒಂದು ವರ್ಷ ಪ್ರೊಬೇಷನ್ ಆದ ನಂತರ ಖಾಯಂ ಮಾಡುವುದನ್ನು ರಹಸ್ಯ ರಿಪೋರ್ಟು ಆಧಾರದ ಮೇಲಿರುವುದಾಗಿಯೂ, ಧೋರಣೆಯನ್ನು ತಾಳಿದೆ. ಇದು ತೀರಾ ಅಪಾಯಕಾರಿಯಾದ ಧೋರಣೆಯಾಗಿದೆ. ಹಿಂದೆ ಇದೇ ಕಾರ್ಖಾನೆಯಲ್ಲಿ ಮೇಲಿನ ಧೋರಣೆ ಅನುಸರಿಸಿ ವರ್ಷದ ನಂತರ ನೌಕರರನ್ನು ತೆಗೆದುಹಾಕಲಾಯಿತು ಎಂಬುದನ್ನು ಮರೆಯುವಂತಿಲ್ಲ. ನೌಕರರನ್ನು ಈ ರೀತಿ ಅವಹೇಳನಕ್ಕೆ ಗುರಿಪಡಿಸುವ ಬದಲು ಮ್ಯಾನೇಜ್‌ಮೆಂಟಿನವರು ಈ ಪ್ರಶ್ನೆಯನ್ನು ತೆರೆದ ಮನಸ್ಸಿನಿಂದ ಪರಿಶೀಲಿಸಿ, ಕೆಲಸದಿಂದ ತೆಗೆದುಹಾಕಿರುವ ಎಲ್ಲ ನೌಕರರನ್ನು ಕೆಲಸಕ್ಕೆ ತೆಗೆದುಕೊಳ್ಳುವರೆಂದು ನಾವು ನಂಬಿದ್ದೇವೆ.

ನೌಕರರ ನಾಯಕರ ಮೇಲೆ ಬೇಕಾದಷ್ಟು ಪೋಲೀಸು ಕೇಸುಗಳನ್ನು ಹಾಕಲಾಗಿದೆ. ಇದನ್ನು ಸರಕಾರವು ವಾಪಸು ಪಡೆಯಬೇಕೆಂದು ಒತ್ತಾಯಪಡಿಸುತ್ತೇವೆ.

ನೌಕರರ ಮುಂದಿರುವ ಇತರ ಪ್ರಶ್ನೆಗಳು ಬಗೆ ಹರಿಯ ಬೇಕಿದ್ದಲ್ಲಿ ಐಕ್ಯತೆಯಿಂದ ಮಾತ್ರ ಸಾಧ್ಯ. ಇದು ಅನುಭವದಿದ ಅವರಿಗೇ ತಿಳಿದಿದೆ. ನಮ್ಮ ದೇಶದ ರಕ್ಷಣಾ ವ್ಯವಸ್ಥೆಯಲ್ಲಿ ಅತಿ ಮುಖ್ಯವಾದ ಕೈಗಾರಿಕೆಯಾದ ಈ ವಿಮಾನ ಕಾರ್ಖಾನೆಯಲ್ಲಿ, ಕೈಗಾರಿಕಾ ಶಾಂತಿ ನೆಲೆಸುವುದು ಅಗತ್ಯ. ಮ್ಯಾನೇಜ್‌ಮೆಂಟಿನವರೂ ನೌಕರರ ಸಂಘದವರೂ ದೇಶದ ಹಿತದೃಷ್ಟಿಯಿಂದ, ಉಳಿದ ವಿವಾದಗಳನ್ನು ಪರಿಹರಿಸುವರೆಂದು ನಂಬಿದ್ದೇವೆ.

ಬೊಂಬಾಯಿಯ

ಕಾರ್ಮಿಕ ಜನತೆಗೆ ಮೇಯರರ ಯೋಜನೆ

ಬೊಂಬಾಯಿಯ ಪ್ರಥಮ ಕಮ್ಯೂನಿಸ್ಟ್ ಮೇಯರ್ ಶಾಂತಾವ್ ಸಾವಳರಾಮ್ (ಎಸ್. ಎಸ್.) ಮಿರಜ್‌ಕರ್‌ರವರು ಬೊಂಬಾಯಿಯ ಕಾರ್ಮಿಕರಿಗೆ ಮತ್ತು ಇತರ ದಲಿತ ಜನರಿಗಾಗಿ ತಮ್ಮ ಮೇಯರ್‌ಗಿರಿಯ ಕಾಲಾವಧಿಯಲ್ಲಿ ಆದಷ್ಟು ಅನುಕೂಲಗಳನ್ನು ಒದಗಿಸಿಕೊಡಲು ಅಥವಾ ಅದರ ಆಧಾರದ ಮೇಲೆ ಮುಂದಿನ ಮೇಯರುಗಳು ಈ ಜನೋಪಯೋಗಿ ಕಾರ್ಯವನ್ನು ಮುಂದುವರಿಸುವಂಥ ಆರು ಅಂಶಗಳ ಯೋಜನೆಯೊಂದನ್ನು ತಯಾರಿಸಿದ್ದಾರೆ.

ಕಡಿಮೆ ಬಾಡಿಗೆಯ ಮನೆ

ಮಳೆಗಾಲ ಮುಗಿಯುತ್ತಲೇ ಟರೋಲಿ ಮತ್ತು ಚೆಂಬೂರುಗಳಲ್ಲಿ ಮನೆಗಳ ನಿರ್ಮಾಣದ ದೊಡ್ಡ ಯೋಜನೆಯನ್ನು ಕೈಗೊಳ್ಳಲಾಗುವುದು. ಇದರಿಂದ ಬಡ ಕಾರ್ಮಿಕ ವರ್ಗದ ಸಂಸಾರಗಳಿಗೆ ಕಮ್ಮಿ ಬಾಡಿಗೆಯ ಮನೆಗಳು ದೊರೆಯುವುವು. ಒಂದು ಕೋಣೆ, ಒಂದು ಅಡಿಗೆ ಕೋಣೆ ಇರುವ ಮನೆಯು 13 ರೂಪಾಯಿ ಬಾಡಿಗೆಗೆ ದೊರೆಯುವುದು.

ಕಡಿಮೆಯೆಂದರೆ 4 ಸಾವಿರ ಸಂಸಾರಗಳು ನೆಲೆಸುವಷ್ಟು ಮನೆಗಳು ಪ್ರತಿ ವರುಷವೂ ನಿರ್ಮಾಣವಾಗುತ್ತಿರಬೇಕು ಎಂದು ಮಿರಜ್‌ಕರರ ಆಶಯ.

ಮನೆ ಇಲ್ಲದವರಿಗಾಗಿ

ಮನೆ ಇಲ್ಲದವರಿಗೆ ಇರಲು ಸ್ಥಳ ಹಾಗೂ ಅದಕ್ಕಾಗಿ ಆರ್ಥಿಕ ಅನುಕೂಲತೆಗಳಿಲ್ಲದಿರುವುದರ ಕಾರಣವಾಗಿ ನಿರ್ಗತಿಕರಾಗಿರುವವರು ಸಣ್ಣ ಸಣ್ಣ ಡೇರೆಗಳನ್ನು ಹಾಕಿ ಜೀವಿಸುತ್ತಾರೆ. ಅವರು ವ್ಯವಸ್ಥಿತ ರೀತಿಯಲ್ಲಿ ನೆಲೆನಿಲ್ಲಲು, ಅವರಿಗಾಗಿ ಕಾಲೋನಿಗಳನ್ನು ನೀಡಲಾಗುವುದು. ಅತೀ ಅಲ್ಪ ಹಣ ವಸೂಲಿ ಮಾಡಿ ಅಥವಾ ಧರ್ಮಾರ್ಥವಾಗಿ ಅಲ್ಲಿ ನೀರು ಹಾಗೂ ಶುಚಿತ್ವದ ವ್ಯವಸ್ಥೆಗಳನ್ನು ಮಾಡಲಾಗುವುದು. ನೆಲಕ್ಕೆ ಸಿಮೆಂಟ್ ಹಾಕಲಾಗುವುದು. ಚೆಂಬೂರು ಮತ್ತು ಗೋವಾಂದಿಗಳಲ್ಲಿ ಈ ರೀತಿಯ ಕಾಲೋನಿಗಳನ್ನು ಸ್ಥಾಪಿಸಲಾಗುವುದು.

ಡೇರೆಗಳನ್ನು ಕೂಡಾ ಕಟ್ಟಿಕೊಳ್ಳಲಾರದ ಸ್ಥಿತಿಯಲ್ಲಿರುವವರು ಫುಟ್‌ಪಾತ್, ಅಂಗಡಿ ಜಗಲಿ, ಸ್ಟೇಶನ್ ಮುಂತಾದೆಡೆಗಳಲ್ಲಿ ಮಲಗುವವರಿದ್ದಾರೆ. ಅಂಥವರಿಗಾಗಿ ಡಾರ್‌ಮೆಂಟ್ ಮತ್ತು ಶೆಡ್‌ಗಳನ್ನು ಕಟ್ಟಲಾಗುವುದು. ಈಗಾಗಲೇ ಎರಡು ಕಡೆಗೆ ಇಂಥ ಷೆಡ್‌ಗಳನ್ನು ಕಟ್ಟಲಾಗಿದೆ.

ಸಾರ್ವಜನಿಕ ಸ್ನಾನ ಗೃಹಗಳು, ಕಕ್ಕಸುಗಳು

ಇದೇ ವರುಷ 50 ಸಾರ್ವಜನಿಕ ಸ್ನಾನ ಗೃಹಗಳನ್ನು ಕಕ್ಕಸುಗಳನ್ನೂ ನಿರ್ಮಿಸಲಾಗುವುದು. ಅವುಗಳನ್ನು ವಿಶೇಷವಾಗಿ ಕಾರ್ಮಿಕರು ಅಧಿಕವಾಗಿರುವ ಪ್ರದೇಶಗಳಲ್ಲಿ ರೀತಿಯಲ್ಲಿ ನಿರ್ಮಿಸಲಾಗುವುದು.

ಬಡವರ ಉದ್ಯಾನ

ಮಲಬಾರ್ ಹಿಲ್‌ನಲ್ಲಿ ಅತಿ ಸುಂದರವಾದ ಕಮಲಾ ನೆಹರೂ ಪಾರ್ಕ್ ಇದೆ. ಆದರೆ ಬಡ ಕಾರ್ಮಿಕರು ಕೊಳಕು ಪ್ರದೇಶಗಳಲ್ಲಿ ವಾಸಿಸುವವರಿಗೆ ಅದು ಎಟಕಲಾರದಷ್ಟು ಮೇಲಿದೆ. ಅದಕ್ಕಾಗಿ ಅಧಿಕ ಕಾರ್ಮಿಕರು ವಾಸಿಸುವ ಸೇವರಿಯದಲ್ಲಿ ಅಷ್ಟೇ ಸುಂದರವಾದ ವಿಹಾರ ಸ್ಥಳವೊಂದನ್ನು ನಿರ್ಮಿಸಲಾಗುವುದು.

ಸಾರ್ವಜನಿಕ ನಾಟಕ ಮಂದಿರ

ಬೊಂಬಾಯಿಯಲ್ಲಿ ನಾಟಕ ಮಂದಿರಗಳೇನೋ ಇವೆ. ಆದರೆ ಅವು ಕೋಟಿಯ ಶ್ರೀಮಂತರಿಗೆ ಮಾತ್ರ. ಇನ್ನೊಂದು ವಿಕ್ಟೋರಿಯಾ ಗಾರ್ಡನ್‌ನಲ್ಲಿದೆ ಅದು ಬಹಳ ಚಿಕ್ಕದು ಅದಕ್ಕಾಗಿ ಎರಡು ಹೊಸ ನಾಟಕ ಮಂದಿರಗಳನ್ನು, ಒಂದು ಪರೇಲಿನಲ್ಲಿ ಇನ್ನೊಂದು ಸಾಂತಾಕ್ರೂಜ್‌ನಲ್ಲಿ ನಿರ್ಮಿಸಲಾಗುವುದು.

ಮನೆ ಕಟ್ಟಲು ಸಹಾಯ ಯೋಜನೆ

ಇದು ಇನ್ನೊಂದು ಯೋಜನೆ. ಸ್ವಂತ ಮನೆ ಕಟ್ಟಲು ಸಾಧ್ಯವಾಗದ ಅಲ್ಪ ಸಂಪಾದನೆ ಇರುವ ಸಂಸಾರಗಳು ಕಾರ್ಪೋರೇಷನ್ನಿನ ಸಹಾಯದಿಂದ ಮನೆ ಕಟ್ಟಿಸಿಕೊಳ್ಳಲು, ಕಂತುಗಳ ಮೂಲಕ ಹಣ ಸಲ್ಲಿಸುವ ರೀತಿಯ ಯೋಜನೆಯನ್ನು ತಯಾರಿಸಲಾಗುವುದು.

ಬೊಂಬಾಯಿಯ ಜನತೆಯ ವಿಶ್ವಾಸ ಗಳಿಸಿರುವ ಹಾಗೂ ಅವರ ಆದರಕ್ಕೆ ಪಾತ್ರರಾಗಿರುವ ಮೇಯರರು ಅಲ್ಲಿಯ ಜನತೆಗಾಗಿ ತಯಾರಿಸಿದ ಯೋಜನೆ ಇದು.

REG. No. M 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone: 3810